ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 2
Pages - 24
₹ - 12
February- 2015



## ಯಾರು ಮಂಗಳಕರನೋ ಅವನೇ ಶಿವ

### ಮಹಾಶಿವರಾತ್ರಿ ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 3100 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 747

# ಸೌಹಾರ್ದ ಸಹಕಾರ ಚಳುವಳಿಯ ದೃಷ್ಟಿಕೋನ 2025 "ಗುರಿ ಸಾಧನೆಯ ದಾರಿ"



> ದೃಷ್ಟಿಕೋನವನ್ನು ಒಂದು ನಿರ್ದಿಷ್ಟ ಅವಧಿಗೆ ಇಟ್ಟುಕೊಂಡು ಕಾರ್ಯ ಪ್ರಾರಂಭಿಸಬೇಕೆಂದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಆದ್ದರಿಂದ ಸೌಹಾರ್ದ ಸಹಕಾರಿ ಚಳುವಳಿಯ ದೃಷ್ಟಿಕೋನ 2025ರ ಕಾರ್ಯಕ್ರಮಗಳನ್ನು ಈ ವರ್ಷದಿಂದಲೇ ಪ್ರಾರಂಭಿಸಿ ಕಾರ್ಯೋನ್ಮುಖರಾಗಬೇಕಿದೆ.

ಆತ್ಮೀಯರೇ,

ರಾಜ್ಯದ ಸೌಹಾರ್ದ ಸಹಕಾರ ಚಳುವಳಿಯ ವೇಗದ ಬೆಳವಣಿಗೆಯ ಜೊತೆಗೆ ಚಳುವಳಿಯ ಗುಣಮಟ್ಟ ಕಾಯ್ದುಕೊಳ್ಳುವುದು ಅಗತ್ಯ. ಸಂಖ್ಯಾತ್ಮಕ ಹಾಗೂ ಗುಣಾತ್ಮಕ ಬೆಳವಣಿಗೆಯತ್ತ ಗಮನ ಹರಿಸಿದಾಗ ಈ ಪ್ರಕ್ರಿಯೆಗೆ ಒಂದು ಗುರಿಯನ್ನು ನಿರ್ದಿಷ್ಟ ಪಡಿಸುವುದು ಅತ್ಯಂತ ಮಹತ್ವದ್ದಾಗುತ್ತದೆ. ಗುರಿಯಿಲ್ಲದ ಪಯಣ ನಿರರ್ಥಕವಾಗುತ್ತದೆ. ಗುರಿ ಇಟ್ಟುಕೊಂಡು ಸಾಗುವಾಗ ಸಾಧನೆ ವೈಫಲ್ಯಗಳ ಪರಾಮರ್ಶೆಗಳ ಜೊತೆಗೆ ಅವಕಾಶಗಳ ಶೋಧನೆಯಾಗುತ್ತದೆ. ಪ್ರಗತಿ ನಮ್ಮದಾಗುತ್ತದೆ. ಆದ್ದರಿಂದ ದೃಷ್ಟಿಕೋನವನ್ನು ಒಂದು ನಿರ್ದಿಷ್ಟ ಅವಧಿಗೆ ಇಟ್ಟುಕೊಂಡು ಕಾರ್ಯ ಪ್ರಾರಂಭಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಆದ್ದರಿಂದ ಸೌಹಾರ್ದ ಸಹಕಾರಿ ಚಳುವಳಿಯ ದೃಷ್ಟಿಕೋನ 2025ರ ಕಾರ್ಯಕ್ರಮಗಳನ್ನು ಈ ವರ್ಷದಿಂದಲೇ ಪ್ರಾರಂಭಿಸಿ ಕಾರ್ಯೋನ್ಮುಖರಾಗಬೇಕಿದೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರಿಗಾಗಿ ಬೀದರನಲ್ಲಿ ದಿನಾಂಕ : 28, 29 ಜನವರಿ 2015 ರಂದು ಸೌಹಾರ್ದ ಸಹಕಾರಿ ಚಳುವಳಿಯ ದೃಷ್ಟಿಕೋನ 2025ರ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ನಿರ್ದೇಶಕರೆಲ್ಲ ಸಕ್ರಿಯವಾಗಿ ಭಾಗವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಚಲಿತ ವಿಷಯಗಳು, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸುವುದರ ಜೊತೆಗೆ ಸೌಹಾರ್ದ ಸಹಕಾರಿ ಚಳುವಳಿ 2025ರ ಹೊತ್ತಿಗೆ ಹೇಗಿರಬೇಕು ಎಂಬುದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ.

ಬೆಂಗಳೂರು ಹಾಗೂ ಬೀದರ್‌ಗಳಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರ ಸಭೆಗಳಲ್ಲೂ ಭಾಗವಹಿಸಿದವರೆಲ್ಲ ಅತ್ಯಂತ ಉತ್ತಮವಾಗಿ ಸ್ಪಂದಿಸಿದ್ದಾರೆ. ಒಳ್ಳೆಯ ಅಭಿಪ್ರಾಯ ಹಾಗೂ ವಿಷಯಗಳನ್ನು ಸೂಚಿಸಿದ್ದಾರೆ.

ಈ ಅಭಿಪ್ರಾಯಗಳ ಜೊತೆಗೆ ತಾವುಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳು 2025ರ ವೇಳೆಗೆ ಹೇಗಿರಬೇಕು ಮತ್ತು ಒಟ್ಟಾರೆ ಸೌಹಾರ್ದ ಸಹಕಾರಿ ಕ್ಷೇತ್ರ ಹೇಗಿರಬೇಕು ಎಂಬ ಬಗ್ಗೆ ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿ, ಸಂಯುಕ್ತ ಸಹಕಾರಿಗೆ ಕಳುಹಿಸಿ, ಅದರಂತೆ ಕಾರ್ಯನಿರ್ವಹಿಸಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ರಚನಾತ್ಮಕ ಬೆಳವಣಿಗೆಗೆ ಉತ್ತಮ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಗಳ ಅಭಿವೃದ್ಧಿಗೆ ಭದ್ರ ನೆಲೆಯಾಗಲಿ ಎಂದು ಆಶಿಸುತ್ತದೆ.

▶▶ ಗುರುನಾಥ ಜಾಂತಿಕರ, ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

## ಒಳ ಪುಟಗಳಲ್ಲಿ . . .

ಸಾಮಾಜಿಕ ಬದ್ಧತೆಗಿಂತ ಹೆಚ್ಚು ಸತ್ಯ ಬದ್ಧತೆ ಫಲಪ್ರದ – ನಿರ್ಭಯಾನಂದ ಸ್ವಾಮೀಜಿ ..... 4

ಸಹಕಾರಿ ಸಂಸ್ಥೆಯ ಆಡಳಿತ ಮಂಡಲಿಯ ಸದಸ್ಯರು, ಸಿಬ್ಬಂದಿ ವರ್ಗ ಮತ್ತು ಸದಸ್ಯರ ಉತ್ತಮ ಸಂಬಂಧ, ಗುಣಾತ್ಮಕತೆ ಹಾಗೂ ಪ್ರಾಮಾಣಿಕ ಸೇವೆ ಇವು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ – ಶ್ರೀ ಗುರುನಾಥ ಜಾಂತಿಕರ ..... 5

ಮುಖ್ಯಕಾರ್ಯನಿರ್ವಾಹಕರ ಗುಣಾತ್ಮಕತೆ ಅಭಿವೃದ್ಧಿಗೆ ಪೂರಕ : ಶ್ರೀ ಗುರುನಾಥ ಜಾಂತಿಕರ ..... 6

ಸಭೆಯಲ್ಲಿನ ಮಾಹಿತಿಗಳನ್ನು ಅರಿತು ಸಂಸ್ಥೆಗಳನ್ನು ಗೆಲ್ಲಿಸಿ – ಶ್ರೀ ವಸಂತ ನಾಯಕ ..... 7

ಜವಾಬ್ದಾರಿ ಸ್ಥಾನದಲ್ಲಿರುವ ಮುಖ್ಯಕಾರ್ಯನಿರ್ವಾಹಕರು ಸಂಪೂರ್ಣ ಮಾಹಿತಿಯನ್ನು ಹೊಂದುವುದಕ್ಕಾಗಿ ತರಬೇತಿ ಹಾಗೂ ಸಭೆಗಳಲ್ಲಿ ಭಾಗವಹಿಸುವುದು ಅವಶ್ಯಕ – ಶ್ರೀ ವೆಂಕಟಸ್ವಾಮಿ ..... 8

66ನೇ ಗಣರಾಜ್ಯೋತ್ಸವ ಆಚರಣೆ ..... 9

ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ .... 10

ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ ..... 11

ಇಗ್ನತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಶಾಖೆಯ ಉದ್ಘಾಟನೆ ..... 17

ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಟ್ಟಡ ಉದ್ಘಾಟನೆ ಹಾಗೂ ವಾರ್ಷಿಕೋತ್ಸವ ..... 18

ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಶಾಖೆಯ ಉದ್ಘಾಟನೆ .. 19

ಉಚಿತ ನೇತ್ರ ತಪಾಸಣಾ ಮತ್ತು ಉಚಿತ ಶಸ್ತ್ರ ಚಿಕಿತ್ಸೆ ಹಾಗೂ ನೇತ್ರದಾನ ಶಿಬಿರ ..... 20

Guidelines for Licensing of Small Finance Banks in the Private Sector ..... 21

ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಹಾಗೂ ಸಹಕಾರ ..... 22

# ಸಂಪಾದಕೀಯ

## ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು - ಅರ್ಥಪೂರ್ಣ ಚರ್ಚೆ - ಹಾಜರಾತಿ ಹೆಚ್ಚಳ ಅಗತ್ಯ

ಪ್ರತಿ ವರ್ಷದಂತೆ ಈ ಬಾರಿಯೂ ರಾಜ್ಯದ ಸೌಹಾರ್ದ ಸಹಕಾರಿಗಳ 2014–15 ನೇ ಸಾಲಿನ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗನ್ನು ಕಳೆದ ಮಾಹೆಯಲ್ಲಿ ನಡೆಸಲಾಗಿದೆ. ವಾರ್ಷಿಕ ಮಹಾ ಸಭೆಗಳನ್ನು 2009–10ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಮೊದಲಿನ ದಿನಗಳಲ್ಲಿ ಈ ಸಭೆಗಳನ್ನು ಕೇಂದ್ರ ಸ್ಥಾನವಾದ ಬೆಂಗಳೂರಿನಲ್ಲಿ ನಡೆಸಲಾಗುತ್ತಿತ್ತು. ಮುಖ್ಯಕಾರ್ಯನಿರ್ವಾಹಕರ ಹಾಜರಾತಿ ಶೇಕಡಾ 40. ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಿದಂತೆ ಹಾಗೂ ಜಿಲ್ಲೆಯ ನಿರ್ದೇಶಕರ ಮತ್ತು ಸಹಕಾರಿಗಳ ಸಲಹೆಯಂತೆ ಸರಾಸರಿ 80–100 ಸೌಹಾರ್ದ ಸಹಕಾರಿಗಳ ಭಾಗವಹಿಸುವಿಕೆ ಸಾಧ್ಯವಾಗುವಂತೆ ಜಿಲ್ಲಾವಾರು ಸಭೆಗಳನ್ನು ನಡೆಸಲಾಯಿತು. ಹಾಜರಾತಿ ಪ್ರಮಾಣ ಶೇಕಡಾ 50 ಆಯಿತು.

ಮುಖ್ಯಕಾರ್ಯನಿರ್ವಾಹಕರ ಸಭೆಗಳು ಅವರವರ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯ ಜೊತೆಗೆ ಬೇರೆ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯ ಬಗ್ಗೆ ಹೆಚ್ಚಿಗೆ ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಗಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಪ್ರಚಲಿತ ವಿಷಯಗಳ ಬಗ್ಗೆ ಮಾಹಿತಿ ಪಡೆಯುವ ಹಾಗೂ ಕೆಲವು ಅಗತ್ಯ ವಿಷಯಗಳನ್ನು ತಿಳಿದುಕೊಳ್ಳುವ ಸಭೆಗಳಾಗಬೇಕು ಎಂದು ಸಂಯುಕ್ತ ಸಹಕಾರಿಯು ಚಿಂತನೆಮಾಡಿ ಈ ಬಾರಿಯ ವಾರ್ಷಿಕ ಸಭೆಗಳನ್ನು ವಿಭಾಗವಾರು ಹಮ್ಮಿಕೊಳ್ಳಲಾಯಿತು.


ಸಭೆಗಳು ಉತ್ತಮವಾಗಿ ನಡೆದಿವೆ. ಉತ್ತಮ ವಿಷಯಗಳ ಬಗ್ಗೆ ಚರ್ಚೆಯಾಗಿದೆ. ವಿಶೇಷವಾಗಿ ಚುನಾವಣೆ ನಡೆಸುವ ವಿಧಾನಗಳು, ಲೆಕ್ಕಪರಿಶೋಧನೆಗೆ ಸಿದ್ಧತೆ, ಸೌಹಾರ್ದ ಸಹಕಾರಿ ಕಾಯ್ದೆಯ ಇತ್ತೀಚಿನ ತಿದ್ದುಪಡಿ ಮುಖ್ಯಾಂಶಗಳ ಬಗ್ಗೆ ವಿಸ್ತøತ ಚರ್ಚೆಯಾಗಿ ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಗಿದೆ.

ಸಹಕಾರಿ ಇಲಾಖೆಯ ಅಧಿಕಾರಿಗಳು, ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉತ್ತಮ ಮಾಹಿತಿ ನೀಡುವುದರ ಜೊತೆಗೆ ಅಧ್ಯಯನ ಸಾಹಿತ್ಯವನ್ನು ಒದಗಿಸಲಾಗಿದೆ. ಚರ್ಚೆಯ ಗುಣಮಟ್ಟವೂ ಹೆಚ್ಚಿದೆ. ಹಾಜರಾತಿ ಪ್ರಮಾಣ ಶೇಕಡಾ 60 ತಲುಪಿರುವುದು ಸಮಾಧಾನಕರವಾದರೂ ನೂರಕ್ಕೆ ನೂರು ಹಾಜರಾತಿ ಅಪೇಕ್ಷಣೀಯ. ಮುಂಬರುವ ದಿನಗಳಲ್ಲಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳನ್ನು ನಡೆಸುವ ಕುರಿತು ನಿಮ್ಮ ಸಲಹೆ ಸೂಚನೆಗಳನ್ನು ನಿರೀಕ್ಷಿಸಲಾಗಿದೆ. ■

## ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಹಾಗೂ ಸೌಹಾರ್ದ ಸಹಕಾರಿ ಚಳುವಳಿ ವಿಷನ್ - 2025

# ಸಾಮಾಜಿಕ ಬದ್ಧತೆಗಿಂತ ಹೆಚ್ಚು ಸತ್ಯ ಬದ್ಧತೆ ಫಲಪ್ರದ - ನಿರ್ಭಯಾನಂದ ಸ್ವಾಮೀಜಿ

28, 29 ಫೆಬ್ರವರಿ 2015 **ಬೀದರ್** : ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗಾಗಿ ವ್ಯವಸ್ಥೆ ಮಾಡಿದ್ದ ಆಡಳಿತ ಪರಿಣಿತಿ ಹಾಗೂ ಸೌಹಾರ್ದ ಸಹಕಾರಿ ಚಳುವಳಿ ವಿಷನ್ – 2025 ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದ ಶ್ರೀ ನಿರ್ಭಯಾನಂದ ಸ್ವಾಮೀಜಿ, ಶ್ರೀ ರಾಮಕೃಷ್ಣ ಮಠ, ಗದಗ ವಿಜಯಪುರ ಇವರು ಇದೊಂದು ಉತ್ತಮ ಕಾರ್ಯಕ್ರಮ.




ಈ ವಿಷಯವು ಅತ್ಯಂತ ಮಹತ್ವದ್ದು. ಈ ಬಗ್ಗೆ ಸಾರ್ವಜನಿಕ ಸೇವೆಯಲ್ಲಿರುವ ಪ್ರತಿಯೊಬ್ಬರು ಹೆಚ್ಚು ಗಮನ ಹರಿಸಬೇಕು. ಸತ್ಯದಿಂದ ಶ್ರೇಯಸ್ಸಾಗುತ್ತದೆ. ಸತ್ಯಬದ್ಧತೆ ಸಾಮಾಜಿಕ ಬದ್ಧತೆಗಿಂತ 100 ಪಾಲು ಹೆಚ್ಚು ಶ್ರೇಯಸ್ಸನ್ನು ಕೊಡುತ್ತದೆ. ಧೀರನಾದವನು ಶ್ರೇಯಸ್ಸನ್ನು ಆಯ್ಕೆ ಮಾಡಿಕೊಳ್ಳಬೇಕು. ಯಾವುದು ಶ್ರೇಯಸ್ಸನ್ನು ಹಾಗೂ ಅಭಿವೃದ್ಧಿಯನ್ನು ಸಾಧಿಸಲು ಮಾರ್ಗ ತೋರುತ್ತದೆಯೋ ಅದೇ ಮೌಲ್ಯವೆನಿಸಿಕೊಳ್ಳುತ್ತದೆ. ಆತ್ಮಸ್ಥೈರ್ಯವನ್ನು ತುಂಬುತ್ತದೆ, ಢಾಂಭಿಕ ಜೀವನ ನಿಜವಾದ ಜೀವನವಲ್ಲ. ಸಾರ್ವಜನಿಕ ಜವಾಬ್ದಾರಿಯುತ ಸ್ಥಾನದಲ್ಲಿರುವವರು ಜೀವನದಲ್ಲಿ ಅಧ್ಯಾತ್ಮಕತೆಯ ತಳಹದಿ ಹೊಂದಿರಬೇಕು. ಇದು ಬುದ್ಧಿ ಹಾಗೂ ಶರೀರ ತೊಳೆಯುವ ಕಾರ್ಯಾಗಾರವಾಗಿದೆ. ಪವರ್ ಆಫ್ ದಿ ಸ್ಪಿರಿಟ್ ಇಸ್ ಮೋರ್ ಸ್ಟ್ರಾಂಗ್ ಎಂದು ನೆಪೋಲಿಯನ್ ಬೋನಾಪಾರ್ಟೆರವರ ಜೀವನ ಉದಾಹರಿಸಿದರು.

ಎರಡು ದಿನಗಳ ತರಬೇತಿ ಶಿಬಿರವನ್ನು ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವ್ ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಅಧ್ಯಕ್ಷತೆ ವಹಿಸಿದ್ದರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಬಿ.ಎ.ಮಹದೇವಪ್ಪನವರು ಆಡಳಿತ ಪರಿಣಿತಿಯ ವಿವಿಧ ಹಂತಗಳು, ಶ್ರೀ ಸುಬ್ರಮಣ್ಯ ಪ್ರಭುರವರು ಸಹಕಾರಿ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ಶ್ರೀ ಋಷಿಕೇಶ ಬಹದ್ದೂರ ದೇಸಾಯಿಯವರು ಬೀದರ್ ಜಿಲ್ಲೆಯ ಇತಿಹಾಸ ಹಾಗೂ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಣ್ಣಸೂಗಪ್ಪನವರು ವಂದಿಸಿದರು.



ಉದ್ಘಾಟನೆ



ಸಂಯುಕ್ತ ಸಹಕಾರಿಯ ನಿರ್ದೇಶಕರು



ಬೀದರ್ ಜಿಲ್ಲೆಯ ಅಧ್ಯಯನದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು.



ಬೀದರ್‌ನ ಪ್ರಸಿದ್ಧ ಸಹಾರ್ದ ತರಬೇತಿ ಕೇಂದ್ರಕ್ಕೆ ಭೇಟಿ

# ಸಹಕಾರಿ ಸಂಸ್ಥೆಯ ಆಡಳಿತ ಮಂಡಲಿಯ ಸದಸ್ಯರು, ಸಿಬ್ಬಂದಿ ವರ್ಗ ಮತ್ತು ಸದಸ್ಯರ ಉತ್ತಮ ಸಂಬಂಧ, ಗುಣಾತ್ಮಕತೆ ಹಾಗೂ ಪ್ರಾಮಾಣಿಕ ಸೇವೆ ಇವು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ – ಶ್ರೀ ಗುರುನಾಥ ಜಾಂತಿಕರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಹಂಯೋಗದೊಂದಿಗೆ ಬೀದರ್ ಜಿಲ್ಲೆ, ಕಲಬುರಗಿ ಹಾಗೂ ಆಳಂದ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಬೀದರ್‌ನ ಶಾರದ ರೂಟ್‌ಸೆಟ್‌ನಲ್ಲಿ ದಿನಾಂಕ : 28.01.2015ರಂದು "ಕಾರ್ಯದಕ್ಷತೆ ಅಭಿವೃದ್ಧಿ" ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಸಹಕಾರಿ ಸಂಸ್ಥೆಯ ಆಡಳಿತ ಮಂಡಲಿಯ ಸದಸ್ಯರು, ಸಿಬ್ಬಂದಿ ವರ್ಗ ಮತ್ತು ಸದಸ್ಯರ ಉತ್ತಮ ಸಂಬಂಧ, ಗುಣಾತ್ಮಕತೆ ಹಾಗೂ ಪ್ರಾಮಾಣಿಕ ಸೇವೆ ಇವು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಎಂದರು. ಶೋಷಣೆ ಮುಕ್ತ ಸಮಾಜ ನಿರ್ಮಾಣದಲ್ಲಿ ಸಹಕಾರಿಗಳ ಪಾತ್ರ ಮುಖ್ಯ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸಹಕಾರಿ ಕ್ಷೇತ್ರ ತಲುಪಿರುವುದು ಶ್ಲಾಘನೀಯ. ಇವು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಮಾದರಿಯಾಗಿವೆ ಎಂದರು.

ಮುಖ್ಯ ಅಥಿತಿಗಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ, ಶ್ರೀ ಭಾಸ್ಕರ ಕಾಮತ್, ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ ರವರು ಆಗಮಿಸಿದ್ದರು.



ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರಿಗಳ ಅಪರ ನಿಬಂಧಕರಾದ (ನಿವೃತ್ತ) ಶ್ರೀ ಬಿ.ಎ. ಮಹಾದೇವಪ್ಪ ಮತ್ತು ಉಪನಿಬಂಧಕರಾದ ಶ್ರೀ ಗೋಪಾಲ ಚೌಹಾಣ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲೆ, ಕಲಬುರಗಿ ಹಾಗೂ ಆಳಂದ ತಾಲೂಕಿನ ಸೌಹಾರ್ದ ಸಹಕಾರಿಗಳಿಂದ 75ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಪ್ರಯೋಜನವನ್ನು ಪಡೆದರು.

ಕಾರ್ಯಕ್ರಮದ ನಿರೂಪಣೆಯನ್ನು ಬೀದರ್‌ನ ದುರ್ಗಾ ಮಾತಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗನ್ನಾಥ ಕರಂಜೆ, ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿ ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರ ಹಾಗೂ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ಕಿರಿಯ ಅಧಿಕಾರಿ ಶ್ರೀ ರಾಜಶೇಖರ ರವರು ಸಲ್ಲಿಸಿದರು. ■

ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು

# ಮುಖ್ಯಕಾರ್ಯನಿರ್ವಾಹಕರ ಗುಣಾತ್ಮಕತೆ ಅಭಿವೃದ್ಧಿಗೆ ಪೂರಕ : ಶ್ರೀ ಗುರುನಾಥ ಜಾಂತಿಕರ

ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ 2013–14ನೇ ಸಾಲಿನ ವಾರ್ಷಿಕ ಸಭೆಯನ್ನು ದಿನಾಂಕ 09.01.2015 ರಂದು ಕಲಬುರಗಿ ನಗರದ "ಹೆಚ್‌ಕೆಸಿಸಿ ಸಭಾಂಗಣ" ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತೀಕರ ರವರು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಕಾರ್ಯನಿರ್ವಾಹಕರ ಗುಣಾತ್ಮಕತೆ ಹಾಗೂ ಸಮಯ ಪ್ರಜ್ಞಾವಂತಿಕೆ ಕಾರ್ಯನಿರ್ವಹಣೆಯೇ ಪ್ರಮುಖವಾಗಿದೆ. ಸಹಕಾರಿಗಳು ಸ್ವತಂತ್ರ್ಯವಾಗಿ ಸರ್ಕಾರದ ನಿಯಂತ್ರಣವಿಲ್ಲದೆ ಕಾರ್ಯನಿರ್ವಹಿಸುವಂತಾದಾಗ ಮಾತ್ರ ಸಹಕಾರ ಕ್ಷೇತ್ರ ಉತ್ತಮ ದಿಸೆಯಲ್ಲಿ ಸಾಗುತ್ತದೆ. ಸಂಯುಕ್ತ ಸಹಕಾರಿಯು ಸ್ವಚ್ಛ ಭಾರತ ಅಭಿಯಾನಕ್ಕೆ ಕೈ ಜೋಡಿಸಿದ್ದು, ಪ್ರತಿ ಶನಿವಾರ ಎಲ್ಲಾ ಸಹಕಾರಿಗಳು ತಮ್ಮ ಕ್ಷೇತ್ರದಲ್ಲಿ ಸ್ವಚ್ಛ ಭಾರತ ಅಭಿಯಾನ ಹಮ್ಮಿಕೊಳ್ಳುವಂತೆ ಕರೆ ನೀಡಿದರು. ಶಾಸನಬದ್ಧ ಕಾರ್ಯಗಳ ಬಗ್ಗೆ ಸೂಕ್ತ ಜ್ಞಾನವನ್ನು ಪಡೆದುಕೊಂಡು ಕಾರ್ಯ ನಿರ್ವಹಿಸಿದರೆ ಮಾತ್ರ ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಆಸ್ತಿಗಳಾಗಲು ಸಾಧ್ಯವೆಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಶಾಂತಿನಾಥ ಎಸ್. ಪಂಡಿತ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಸಭೆಗೆ ಮುಖ್ಯ ಅತಿಥಿಗಳಾಗಿ ಶ್ರೀ ವೈ.ಟಿ.ಪಾಟೀಲ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಶ್ರೀ ಕರಿಬಸಪ್ಪ, ಅಪರ ನಿಬಂಧಕರು, ಬೆಂಗಳೂರು ಮತ್ತು ಡಿಸಿಸಿ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಬಸಪ್ಪ ಬೆಣ್ಣೂರು ಉಪಸ್ಥಿತರಿದ್ದರು.



ಸಭೆಯ ಅವಧಿಯಲ್ಲಿ ಶ್ರೀ ಶರಣಪ್ಪ ರೋಜ, ಸಹಕಾರಿಗಳ ಸಹಾಯಕ ನಿಬಂಧಕರು (ನಿವೃತ್ತ), ಕಲಬುರಗಿ ಇವರು "ಚುನಾವಣಾ ಪೂರ್ವ ಸಿದ್ಧತೆ" ವಿಷಯದ ಬಗ್ಗೆ ಹಾಗೂ ಶ್ರೀ ಮಲ್ಲಿಕಾರ್ಜುನ ಮಹಾಂತಗೋಳ, ಸನ್ನದು ಲೆಕ್ಕಪರಿಶೋಧಕರು, ಕಲಬುರಗಿ ಇವರು "ಆದಾಯ ತೆರಿಗೆ, ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ಇತರೆ ಕಾನೂನುಗಳ" ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಸಭೆಯಲ್ಲಿ ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಯ 105 ಸಹಕಾರಿಗಳಿಂದ 162 ಪ್ರತಿನಿಧಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳು ಎಸಿಸಿ ಕೇಂದ್ರವನ್ನು ಪ್ರಾರಂಭಿಸುವ ಸಮಯದಲ್ಲಿ ಗಮನಿಸಬೇಕಾದ ಅಂಶಗಳು

- ಸದಸ್ಯ ಸಹಕಾರಿಗಳು ಎಸಿಸಿ ಕೇಂದ್ರವನ್ನು ಪ್ರಾರಂಭಿಸಲು ಬೇಕಾದ ಅಗತ್ಯ ಹೂಡಿಕೆಯನ್ನು ಮಾಡಲು ಆರ್ಥಿಕ ಸದೃಢತೆ ಇರಬೇಕು.
- ಸದಸ್ಯ ಸಹಕಾರಿಗಳು ಮೊದಲು ತಮ್ಮ ಕಾರ್ಯವ್ಯಾಪ್ತಿಯನ್ನು ತಿಳಿದಿರಬೇಕು.
- ಸದಸ್ಯ ಸಹಕಾರಿಗಳು ಪ್ರಧಾನ ಕಛೇರಿಯನ್ನು ಹೊರತು ಪಡಿಸಿ ಬೇರೆ ಸ್ಥಳಗಳಲ್ಲಿ ಎಸಿಸಿ ಕೇಂದ್ರವನ್ನು ತೆರೆಯಬೇಕಾದರೆ ಮೊದಲು ಸಂಯುಕ್ತ ಸಹಕಾರಿಯಿಂದ ಶಾಖೆ ತೆರೆಯಲು ಅನುಮತಿಯನ್ನು ಪಡೆದು ನಂತರ ಸಂಯುಕ್ತ ಸಹಕಾರಿಯಿಂದ ಶಾಖೆ ತೆರೆಯಲು ಅನುಮತಿ ಪಡೆದ ಪತ್ರದ ಪ್ರತಿಯನ್ನು ಕೋರಿಕೆ(ಎಸಿಸಿ ಕೇಂದ್ರವನ್ನು ತೆರೆಯಲು) ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಬೇಕು.
- ಸದಸ್ಯ ಸಹಕಾರಿಗಳು ಲಾಭದ ದೃಷ್ಟಿಯಿಂದ ಎಸಿಸಿ ಕೇಂದ್ರವನ್ನು ಪ್ರಾರಂಭಿಸಬಾರದು ಬದಲಿಗೆ ಸದಸ್ಯರಿಗೆ ಸೇವೆಯನ್ನು ಒದಗಿಸುವ ದೃಷ್ಟಿಯಿಂದ ಮಾತ್ರ ಎಸಿಸಿ ಕೇಂದ್ರವನ್ನು ಪ್ರಾರಂಭಿಸಬೇಕು.
- ಸುಶಿಕ್ಷಿತ ಹಾಗೂ ಪರಿಣಿತ (ಗಣಕಯಂತ್ರ) ಸಿಬ್ಬಂದಿಯನ್ನು ಹೊಂದಿರಬೇಕು.

# ಸಭೆಯಲ್ಲಿನ ಮಾಹಿತಿಗಳನ್ನು ಅರಿತು ಸಂಸ್ಥೆಗಳನ್ನು ಗೆಲ್ಲಿಸಿ – ಶ್ರೀ ವಸಂತ ನಾಯಕ



ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳಿಗಾಗಿ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿನಾಂಕ 23 ಮತ್ತು 24 ಜನವರಿ 2015 ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು.

ದಿನಾಂಕ 23 ಜನವರಿ 2015 ರಂದು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕ ರವರು ಸೌಹಾರ್ದ ಸಹಕಾರಿಗಳ ಪಾಲ್ಗೊಳ್ಳುವಿಕೆಯು ಸಭೆಯನ್ನು ಉಪಯುಕ್ತವಾಗಿಸುತ್ತದೆ. ಸಭೆಯಲ್ಲಿನ ಮಾಹಿತಿಗಳನ್ನು ಅರಿತು ಸಂಸ್ಥೆಗಳನ್ನು ಗೆಲ್ಲಿಸಿ ಎಂದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನ ಹಾಗೂ ಸಹಕಾರಿಗಳ ಸಹಾಯಕ ನಿಬಂಧಕರಾದ (ಕಾನೂನು ಕೋಶ) ಶ್ರೀ ಮಂಜುನಾಥ ರವರು ಆಗಮಿಸಿದ್ದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ರವರು ಮಾತನಾಡಿ ಸ್ವಾತಂತ್ರ್ಯವನ್ನು ಯಾರೂ ಕೊಡುವುದಿಲ್ಲ, ನಾವು ಪಡೆಯಬೇಕಾಗುತ್ತದೆ. ಕಾಯ್ದೆ ತಿದ್ದುಪಡಿಗೆ ಹೆದರಬೇಕಿಲ್ಲ ಎಂದರು. ಸಭೆಯ ಪ್ರಾಸ್ತಾವಿಕವನ್ನು ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ., ಸ್ವಾಗತವನ್ನು ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ ರವರು ನಡೆಸಿಕೊಟ್ಟರು.

# ತಿದ್ದುಪಡಿಯಿಂದುಂಟಾಗುವ ತೊಂದರೆಯನ್ನು ನಿವಾರಿಸುವುದು ಕೂಡ ಸರ್ಕಾರದ ಕರ್ತವ್ಯ – ಶ್ರೀ ಭಾ. ಬೀ. ಪತ್ತಾರ್



ದಿನಾಂಕ : 24 ಜನವರಿ 2015 ರಂದು ಬೆಂಗಳೂರು ನಗರ, ಚಿತ್ರದುರ್ಗ, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಮುಖ್ಯಕಾರ್ಯನಿರ್ವಾಹಕರಿಗಾಗಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಶ್ರೀ ಭಾ. ಬೀ. ಪತ್ತಾರ್, ಮಾನ್ಯ ವಿಶೇಷ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರು ಸೌಹಾರ್ದ ಸಹಕಾರ ಕಾಯ್ದೆ ಜಾರಿಯ ಹಿನ್ನೆಲೆ, ಅಧಿನಿಯಮ ತಿದ್ದುಪಡಿಯ ಮಾಹಿತಿಯ ಹಂತಗಳ ಬಗ್ಗೆ ವಿವರಿಸಿದರು. ಯಾವುದೇ ಕಾಯ್ದೆಯ ಅನುಷ್ಠಾನದಿಂದ ಅದರಲ್ಲಿನ ತೊಂದರೆಗಳ ಬಗ್ಗೆ ಅರಿವು ಉಂಟಾಗುತ್ತದೆ ಆಗ ತಿದ್ದುಪಡಿಯ ಅಗತ್ಯ ಉಂಟಾಗುತ್ತದೆ, ಇಂತಹ ಸಂದರ್ಭದಲ್ಲಿ ತಿದ್ದುಪಡಿಯಿಂದುಂಟಾಗುವ ತೊಂದರೆಯನ್ನು ನಿವಾರಿಸುವುದು ಕೂಡ ಸರ್ಕಾರದ ಕರ್ತವ್ಯ ಎಂದರು.

ಮುಖ್ಯ ಅತಿಥಿಗಳಾಗಿ ಸಹಕಾರಿಗಳ ಸಹಾಯಕ ನಿಬಂಧಕರಾದ (ಕಾನೂನು ಕೋಶ) ಶ್ರೀ ಮಂಜುನಾಥ ರವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನ ರವರು ವಹಿಸಿದ್ದರು.

ಎರಡು ದಿನಗಳ ಸಭೆಯ ಅವಧಿಯಲ್ಲಿ "ಚುನಾವಣಾ ಪೂರ್ವಸಿದ್ಧತೆ & ಕಾಯ್ದೆ ತಿದ್ದುಪಡಿ" ಕುರಿತು ಮಾಹಿತಿಯನ್ನು ಶ್ರೀ ಮಂಜುನಾಥ, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, "ಲೆಕ್ಕಪರಿಶೋಧನೆ" ಬಗ್ಗೆ ಮಾಹಿತಿಯನ್ನು ಶ್ರೀಮತಿ ಪುಷ್ಪ, ಸ.ಲೆ. ಉಪನಿರ್ದೇಶಕರು ಹಾಗೂ "ಲೆಕ್ಕಪರಿಶೋಧನೆ, ಆದಾಯ ತೆರಿಗೆ & ಸಹಕಾರಿ ಸಂಸ್ಥೆಗಳಿಗೆ ಅನ್ವಯಿಸುವ ಇತರೆ ಕಾಯ್ದೆ"ಗಳ ಕುರಿತು ಶ್ರೀ ಮಧುಕರ್ ಹೆಗಡೆ, ಸನ್ನದು ಲೆಕ್ಕಪರಿಶೋಧಕರು ಉಪನ್ಯಾಸ ನೀಡಿದರು. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ನಡೆಸಿಕೊಟ್ಟರು.

ಸಭೆಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಹಾಗೂ ತುಮಕೂರು ಜಿಲ್ಲೆಗಳ 103 ಸಹಕಾರಿಗಳಿಂದ 126 ಪ್ರತಿನಿಧಿಗಳು ಭಾಗವಹಿಸಿದ್ದರು. ಬೆಂಗಳೂರು ನಗರ, ಚಿತ್ರದುರ್ಗ, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ 107 ಸಹಕಾರಿಗಳಿಂದ 122 ಪ್ರತಿನಿಧಿಗಳು ಭಾಗವಹಿಸಿದ್ದರು.

## ಜವಾಬ್ದಾರಿ ಸ್ಥಾನದಲ್ಲಿರುವ ಮುಖ್ಯಕಾರ್ಯನಿರ್ವಾಹಕರು ಸಂಪೂರ್ಣ ಮಾಹಿತಿಯನ್ನು ಹೊಂದುವುದಕ್ಕಾಗಿ ತರಬೇತಿ ಹಾಗೂ ಸಭೆಗಳಲ್ಲಿ ಭಾಗವಹಿಸುವುದು ಅವಶ್ಯಕ – ಶ್ರೀ ವೆಂಕಟಸ್ವಾಮಿ



ಮೈಸೂರು ವಿಭಾಗದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರ ವಾರ್ಷಿಕ ಸಭೆಯನ್ನು ದಿನಾಂಕ 22 ಜನವರಿ 2015ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಬೆಳಿಗ್ಗೆ 10–00 ಗಂಟೆಗೆ ಆಯೋಜಿಸಲಾಗಿತ್ತು. ಸಭೆಯನ್ನು ಶ್ರೀ ಎಂ.ವೆಂಕಟಸ್ವಾಮಿ, ಮಾನ್ಯ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು ಇವರು ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯವರು ಉತ್ತಮ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಪೂರಕವಾಗುವ ಮಹತ್ವದ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಗುರುನಾಥ ಜಾಂತಿಕರ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಶ್ರೀ ಎಸ್ ಆರ್ ಸತೀಶ್‌ಚಂದ್ರ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ವಸಂತನಾಯಕ, ಮಾನ್ಯ ನಿರ್ದೇಶಕರು, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು, ಶ್ರೀ ಎಂ.ಪಿ. ಮಂಜುನಾಥ, ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು (ಕಾನೂನು ಕೋಶ), ಬೆಂಗಳೂರು ಇವರು ಭಾಗವಹಿಸಿದ್ದರು. ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾಡಿದರು.

ಸಭೆಯಲ್ಲಿ ಮೈಸೂರು ವಿಭಾಗದ 8 ಜಿಲ್ಲೆಗಳಿಂದ 96 ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## ಸಹಕಾರಿಗಳ ಬೆಳವಣಿಗೆಯಲ್ಲಿ ಮುಖ್ಯಕಾರ್ಯನಿರ್ವಾಹಕರ ಪಾತ್ರ ಬಹಳ ಮಹತ್ವದ್ದು – ಶ್ರೀ ಎಂ.ಬಿ.ಕಲಾಲ್



ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ದಿನಾಂಕ 13.01.2015ರಂದು ಮುನ್ಸಿಪಲ್ ನೌಕರರ ಸಹಕಾರ ಸಂಘ ನಿ., ಟೌನ್‌ಹಾಲ್ ಹತ್ತಿರ, ಜೆ.ಸಿ.ನಗರ, ಹುಬ್ಬಳ್ಳಿ ಇಲ್ಲಿ ಏರ್ಪಡಿಸಲಾಗಿತ್ತು.

ಸಭೆಯನ್ನು ಧಾರವಾಡ ಜಿಲ್ಲೆಯ ಸಹಕಾರಿಗಳ ಉಪನಿಬಂಧಕರಾದ ಶ್ರೀ ಕೆ.ಎಲ್.ಶ್ರೀನಿವಾಸರವರು ಉದ್ಘಾಟಿಸಿದರು. ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ರವಿ ಯಲಿಗಾರ ರವರು ಆಗಮಿಸಿದ್ದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲ್‌ರವರು ಮಾತನಾಡಿ ಸಹಕಾರಿಗಳ ಬೆಳವಣಿಗೆಯಲ್ಲಿ ಮುಖ್ಯಕಾರ್ಯನಿರ್ವಾಹಕರ ಪಾತ್ರ ಬಹಳ ಮಹತ್ವದ್ದು, ಇಂದಿನ ಸಭೆಯಲ್ಲಿ ಮಹತ್ವದ ವಿಷಯಗಳ ಉಪನ್ಯಾಸವನ್ನು ಏರ್ಪಡಿಸಿದ್ದು, ಅದರ ಪ್ರಯೋಜನವನ್ನು ಪಡೆದು ತಮ್ಮ ಸಹಕಾರಿಗಳ ಕಾರ್ಯದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಸಭೆಯ ಅವಧಿಯಲ್ಲಿ ಧಾರವಾಡ ಜಿಲ್ಲೆಯ ಉಪನಿಬಂಧಕರಾದ ಶ್ರೀ ಕೆ.ಎಲ್.ಶ್ರೀನಿವಾಸರವರು "ಸಹಕಾರಿಗಳ ಚುನಾವಣೆ"ಯ ಬಗ್ಗೆ ಹಾಗೂ ಧಾರವಾಡ ಜಿಲ್ಲೆಯ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ರಂಗಸ್ವಾಮಿಯವರು "ಸಹಕಾರಿಗಳ ಲೆಕ್ಕಪರಿಶೋಧನೆ"ಯ ಬಗ್ಗೆ ಮಾಹಿತಿ ನೀಡಿದರು. ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ "ಸೌಹಾರ್ದ ಕಾಯ್ದೆ ತಿದ್ದುಪಡಿ" ಬಗ್ಗೆ ಹಾಗೂ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥರವರು "ಸಹಕಾರಿ ಸಂಸ್ಥೆಗಳಿಗೆ ಅನ್ವಯಿಸುವ ಆದಾಯ ತೆರಿಗೆ ಕಾನೂನು ಹಾಗೂ ಇತರ ಕಾನೂನುಗಳು" ಬಗ್ಗೆ ಉಪನ್ಯಾಸ ನೀಡಿದರು. ಸಭೆಯಲ್ಲಿ ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯ 132 ಸೌಹಾರ್ದ ಸಹಕಾರಿಗಳಿಂದ 143 ಪ್ರತಿನಿಧಿಗಳು ಭಾಗವಹಿಸಿದ್ದರು.

## 66ನೇ ಗಣರಾಜ್ಯೋತ್ಸವ ಆಚರಣೆ





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಕೇಂದ್ರ ಕಛೇರಿ, ಕಲಬುರ್ಗಿ ವಿಭಾಗೀಯ ಕಛೇರಿ ಹಾಗೂ ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ಗಣರಾಜ್ಯೋತ್ಸವ ಆಚರಣೆ.



ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಹಾಗೂ ದಿ ಕಲ್ಲೋಳಿ ಹಾಲು ಉತ್ಪಾದಕರ ಸಹಕಾರಿ ಸಂಘ.



ಕೌಸ್ತುಭ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೈಸೂರು.

## "10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ" ಶಿಬಿರದ 12ನೇ ತಂಡದ ಶಿಬಿರಾರ್ಥಿಯ ಅನಿಸಿಕೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ರಾಜ್ಯದ ಸೌಹಾರ್ದ ಸಹಕಾರಿಯ ಸಿಬ್ಬಂದಿಯವರಿಗಾಗಿ ನಡೆಸಿಕೊಂಡು ಬರುತ್ತಿರುವ "ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ"ಯಲ್ಲಿ ನಾನು ದಿನಾಂಕ 18.12.2014 ರಿಂದ 27.12.2014ರ ವರೆಗೆ ಮಹಾನ್ ಮಾನವತಾವಾದಿ 'ವಿಶ್ವ ಗುರು' ಶ್ರೀ ಬಸವಣ್ಣನವರ ಐಕ್ಯ ಸ್ಥಳವಾದ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕೂಡಲಸಂಗಮದ ಕೃಷ್ಣೆ, ಭೀಮೆ, ಘಟಪ್ರಭೆಯರ ತ್ರಿವೇಣಿ ಸಂಗಮದ ಸಂಗಮನಾಥನ ಸನ್ನಿಧಿಯಲ್ಲಿ 12ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿಯಲ್ಲಿ ಭಾಗವಹಿಸಿದ್ದು ನಿಜಕ್ಕೂ ಜೀವನ ಧನ್ಯವಾಗಿದೆ.

▸▸ **ಶ್ರೀ ಚನ್ನಬಸಪ್ಪ.ವೀ.ವಾಸನದ,** ಮು.ಕಾ.ನಿ, ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾನಗಲ್ಲ.



ಶ್ರೀ ಯಶಸ್ವಿನಿ ಸೌಹಾರ್ದ ಪತ್ತಿನ ಸಹಕಾರ ನಿಯಮಿತದಲ್ಲಿ ಸಿಸ್ಕೊ ಬ್ಯಾಂಕಿನ ಪ್ರಧಾನ ಕಛೇರಿಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಶ್ರೀ ಗಿರೀಶ್ ಕಾರ್ನಾಡ್ ಉದ್ಘಾಟಿಸಿದರು.

# ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನೆ





ದಿನಾಂಕ : 25 ಜನವರಿ 2015ರಂದು ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡವನ್ನು ಪರಮಪೂಜ್ಯ ಶ್ರೀ ಮ.ನಿ.ಪ್ರ. ಸಿದ್ಧರಾಮ ಮಹಾಸ್ವಾಮಿಗಳು, ರುದ್ರಾಕ್ಷಿಮಠ ನಾಗನೂರ ಇವರ ದಿವ್ಯ ಸಾನಿಧ್ಯದಲ್ಲಿ ಬಾಗಲಕೋಟೆ ಜಿಲ್ಲೆಯ ಶಾಸಕರಾದ ಶ್ರೀ ಹೆಚ್.ವೈ.ಮೇಟಿ ಯವರು ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಹಿತಿ ಹಾಗೂ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲರವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೀಳಗಿ ಶಾಸಕರಾದ ಶ್ರೀ ಜೆ.ಟಿ.ಪಾಟೀಲ್, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಮಾಜಿ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಜಯಕುಮಾರ ಸರನಾಯಕ್, ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್.ಜಿ.ನಂಜಯ್ಯನಮಠ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಪ್ರಕಾಶ ತಪಶೆಟ್ಟಿ, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಎಂ.ಪಿ.ಶೆಲ್ಲಿಕೇರಿ ಮುಂತಾದವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಎನ್.ಪಾಟೀಲ್‌ರವರು ಸ್ವಾಗತಿಸಿದರು. ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಸಿ.ಮೋಟಗಿಯವರು ಕಾರ್ಯಕ್ರಮ ನಿರೂಪಣೆ ಮಾಡಿದರು. ನಿರ್ದೇಶಕರಾದ ಶ್ರೀ ನಂದಕುಮಾರ್ ಪಾಟೀಲ್ ವಂದಿಸಿದರು.

## ಮಂಗಳೂರು ಸೌಹಾರ್ದ ಸಹಕಾರಿ ನಿ. : ಉಚಿತ ನೇತ್ರ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರ



ಮಂಗಳೂರು ಸೌಹಾರ್ದ ಸಹಕಾರಿ ನಿ., ಜಪ್ಪು ಸಹಕಾರಿಯ 5ನೇ ವರ್ಷದ ಸವಿನೆನಪಿಗಾಗಿ ಪ್ರಸಾದ್ ನೇತ್ರಾಲಯ-ಶಾಂತಿನಗರ ಸೇವಾ ಸಮಿತಿ-ನೇತ್ರ ಜ್ಯೋತಿ-ಜಿಲ್ಲಾ ಆರೋಗ್ಯ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 25.01.2015ರಂದು ಉಚಿತ ನೇತ್ರ ತಪಾಸಣಾ ಹಾಗೂ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿತ್ತು.

ಶಾಸಕರಾದ ಶ್ರೀ ಜೆ.ಆರ್.ಲೋಬೊ, MLC ಶ್ರೀ ಐವಾನ್ ಡಿಸೋಜಾರವರು, ಪ್ರತಿಪಕ್ಷದ ನಾಯಕರಾದ ಶ್ರೀ ಪ್ರೇಮಾನಂದ ಶೆಟ್ಟಿ, ಸ್ಥಳೀಯ ಕಾರ್ಪೋರೇಟರ್ ಟಿ.ಕೆ.ಶೈಲಜಾ, ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು. 150 ಶಿಬಿರಾರ್ಥಿಗಳಲ್ಲಿ 30 ಶಿಬಿರಾರ್ಥಿಗಳಿಗೆ ಶಸ್ತ್ರ ಚಿಕಿತ್ಸೆ ಹಾಗೂ 60 ಶಿಬಿರಾರ್ಥಿಗಳಿಗೆ ಕನ್ನಡಕದ ಪ್ರಯೋಜನವನ್ನು ಒದಗಿಸಲಾಗಿದೆ.

# ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ





ಜನವರಿ 1 ಸೌಹಾರ್ದ ಸಹಕಾರಿ ದಿನಾಚರಣೆಯಂದು ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಾರಟಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತಪ್ಪ ಸಾಲೋಣಿಯವರು ಮತ್ತು ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ.ಸಣ್ಣಸೂಗಪ್ಪನವರು ಧ್ವಜಾರೋಹಣ ನೆರವೇರಿಸಿದರು.

"ಸ್ವಚ್ಛ ಭಾರತಕ್ಕಾಗಿ ಸಹಕಾರಿಗಳು" ಎಂಬ ಸೌಹಾರ್ದ ಸಹಕಾರಿಗಳ ಘೋಷದಂತೆ ಕಾರಟಗಿಯ ಪತಂಜಲಿ ಯೋಗ ಸಮಿತಿಯೊಂದಿಗೆ ಸಹಕಾರಿಯ ಮುಖ್ಯ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡು ಪ್ರತಿಯೊಬ್ಬರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಿ, ನಂತರ ಕಾರಟಗಿಯ ದೇವಸ್ಥಾನಗಳಿಗೆ ಕಸದಬುಟ್ಟಿಗಳನ್ನು ವಿತರಣೆ ಮಾಡಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಯಶಸ್ವಿಗೊಳಿಸಲಾಯಿತು.

ಜನವರಿ 6 ರಂದು "ಸ್ವಚ್ಛ ಭಾರತಕ್ಕಾಗಿ ಸಹಕಾರಿಗಳು" ಎಂಬ ಸೌಹಾರ್ದ ಸಹಕಾರಿಗಳ ಘೋಷದಂತೆ ಕಾರಟಗಿಯ ಎಲ್ಲಾ ಸೌಹಾರ್ದ ಸಹಕಾರಿಗಳು ಕಾರಟಗಿ ಗ್ರಾಮ ಪಂಚಾಯತಿಯಿಂದ ಸರಕಾರಿ ಶಾಲೆಯ (ಸುಮಾರು 1.5 ಕಿ.ಮೀ.) ವರೆಗೂ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಯಶಸ್ವಿಯಾಗಿ ನೆರವೇರಿಸಲಾಯಿತು.



ಶ್ರೀ ಜೈ ಜಿನೇಂದ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಶಮನೇವಾಡಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.




ಪ್ರಗತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಮಹಾಲಕ್ಷ್ಮೀ ಸೌಹಾರ್ದ ಕೋ ಆಪರೇಟಿವ್ ಲಿ., ಸಿಂಧನೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಸಿರಿಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ದಾನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಲೋಕಾಪುರ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಸಂದರ್ಭದಲ್ಲಿ ಸಹಕಾರಿಯ ವತಿಯಿಂದ 'ಈಜಿ ಮನಿ' ಯೋಜನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಆರ್.ಬೈರೇಗೌಡರವರು ಉದ್ಘಾಟಿಸಿದರು.



ಶ್ರೀ ಕನ್ನಿಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜಶೆಟ್ಟರವರಿಂದ ಧ್ವಜಾರೋಹಣ.



ಅಕ್ಕಮಹಾದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಹಿರೇಬಾಗೇವಾಡಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



ನವೋದಯ ಗ್ರಾಮ ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಂದಾಪೂರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಅಂಕಲಿಯ ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಅಧ್ಯಕ್ಷರಾದ ಶ್ರೀ ಮಹಾಂತೇಶ ಲಿಂಗೇಗೌಡ ಪಾಟೀಲ್ ಧ್ವಜಾರೋಹಣ ಮಾಡುವ ಮೂಲಕ ನೆರವೇರಿಸಿದರು.



ವಾಮನಮೂರ್ತಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕ ಆಸಂಗಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ.



ಶ್ರೀ ಭುವನೇಶ್ವರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಬಾದಾಮಿಯ ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿ ನಿ.,ಯಲ್ಲಿ ಸ್ವಚ್ಛತಾ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆ.



ಕೊಡಗು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಮಡಿಕೇರಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಗಾಯತ್ರಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಹುಳಿಯಾರು ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾದಾಮಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ. ಈ ಸಂದರ್ಭದಲ್ಲಿ ಸದಸ್ಯರಿಗೆ ವೈದ್ಯಕೀಯ ಸಹಾಯ ಧನವನ್ನು ವಿತರಿಸಲಾಯಿತು.



ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಕ್ಯಾತ್ಸಂದ್ರ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ. ಈ ಸಂದರ್ಭದಲ್ಲಿ ರಾಜ್ಯದ ಶ್ರೇಷ್ಠ ಸಹಕಾರಿ ಪ್ರಶಸ್ತಿ ವಿಜೇತರಾದ ಶ್ರೀ ಎನ್.ಎಸ್.ಜಯಕುಮಾರ್ ರವರಿಗೆ ಸನ್ಮಾನವನ್ನು ಹಾಗೂ ಶಾಲಾ-ಕಾಲೇಜು ಮಕ್ಕಳಿಗೆ ಪ್ರತಿಭಾಪುರಸ್ಕಾರವನ್ನು ಮಾಡಲಾಯಿತು.



ಶ್ರೀ ಸಿದ್ದೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳ್ಳುಡು ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಅಕ್ಕಮಹಾದೇವಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಹಿರೇಬಾಗೇವಾಡಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಸಾಯಿರಾಮ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಹಿರೇಬಾಗೇವಾಡಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಸಾಯಿ ಗಣೇಶ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಉಡುಪಿ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಯಮಕನಮರಡಿಯ ಸೌಹಾರ್ದ ಸಹಕಾರಿಗಳ ಸಹಯೋಗದೊಂದಿಗೆ ಸಹಕಾರಿಗಳ "ಸ್ವಚ್ಛ ಭಾರತ" ಅಭಿಯಾನ. ಈ ಅಭಿಯಾನದಲ್ಲಿ ಶಿವಾ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್.ಸುಲ್ತಾನಪುರಿ, ಸಹಕಾರಿ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಎಂ.ಆರ್.ಘಸ್ತಿ, ಯಮಕನಮರಡಿಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಿದ್ದಾಪುರ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮ.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಹಿರೇಬಾಗೇವಾಡಿ ಸೌಹಾರ್ದ ಸಹಕಾರಿಗಳ ಸಹಯೋಗದೊಂದಿಗೆ ಸಹಕಾರಿಗಳ "ಸ್ವಚ್ಛ ಭಾರತ" ಅಭಿಯಾನ.



ಶ್ರೀ ಚಿಗುರು ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಜಮಖಂಡಿ ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ.



ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ ಸ್ವಚ್ಛತಾ ಕಾರ್ಯಕ್ರಮಕ್ಕೆ ಸಹಕಾರಿಯ ಗೌರವಾಧ್ಯಕ್ಷರಾದ ರಾಜಗುರು ಡಾ.ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳಿಂದ ಚಾಲನೆ.



ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸ್ವಚ್ಛತಾ ಸಪ್ತಾಹ ಆಚರಣೆಯಂತೆ ತೀರ್ಥಹಳ್ಳಿಯ ಎಲ್ಲಾ ಸೌಹಾರ್ದ ಸಹಕಾರಿಗಳು ಪಟ್ಟಣ ಪಂಚಾಯಿತಿಯ ಸಹಕಾರದೊಂದಿಗೆ ರಾಮೇಶ್ವರ ದೇವಸ್ಥಾನದ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.



ಸಿರಿ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ.



ಜಿಎಂ ಸೌಹಾರ್ದ ಪತ್ತಿನ ಸಹಕಾರಿಯ ದಾವಣಗೆರೆ ಕೇಂದ್ರ ಕಛೇರಿ, ಭೀಮಸಮುದ್ರ ಶಾಖೆ ಮತ್ತು ಸಂಗೂರು ಶಾಖೆ (ಹಾವೇರಿ ಜಿಲ್ಲೆ) ಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ.



ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ.



ಅಂಕಲಿಯ ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವತಿಯಿಂದ ಸ್ವಚ್ಛತಾ ಕಾರ್ಯಕ್ರಮ.



ನವಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತುಮಕೂರು ಸಹಕಾರಿಯಿಂದ ಸ್ವಚ್ಛತಾ ಸಪ್ತಾಹದ ಆಚರಣೆ.



ಶ್ರೀ ವಿನಾಯಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಬ್ರಹ್ಮನಾಥ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ.



ಶ್ರೀ ಗಾಯತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸಹಕಾರಿಯಿಂದ ಸ್ವಚ್ಛತಾ ಸಪ್ತಾಹದ ಆಚರಣೆ.



ಶ್ರೀ ರೇಣುಕಾದೇವಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯಿಂದ ಸ್ವಚ್ಛತಾ ಕಾರ್ಯಕ್ರಮ.

## ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಶಾಖೆಯ ಉದ್ಘಾಟನೆ



ನಂ. 562 ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಪೊನ್ನಂಪೇಟೆ ಸಹಕಾರಿಯ ಗೋಣಿಕೊಪ್ಪಲು ಶಾಖೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್. ಆರ್.ಸತೀಶ್‌ಚಂದ್ರರವರಿಂದ ಉದ್ಘಾಟನೆ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಕೆ.ಸೋಮಯ್ಯ, ಉಪಾಧ್ಯಕ್ಷರಾದ ಶ್ರೀ ಕಡೇಮಾಡ ಜಿ. ಭೀಮಯ್ಯ, ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಡಿ.ಮಂಜುನಾಥ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಶರೀನ್ ಸುಬ್ಬಯ್ಯನವರು, ಶ್ರೀ ಚೆರಿಯಪಂಡ ಕೆ ಉತ್ತಪ್ಪ, ಶ್ರೀ ಕಡೇಮಾಡ ಸುನಿಲ್ ಮಾದಪ್ಪ, ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಆರೋಗ್ಯ ಸಚಿವರಾದ ಯು.ಟಿ. ಖಾದರ್‌ರವರಿಂದ ಸೈಂಟ್ ಮಿಲಾಗ್ರಿಸ್ ಶಾಖೆಗೆ ಚಾಲನೆ

ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಂಯ 26ನೇ ನೂತನ ಮಂಗಳೂರು ಶಾಖೆಯ ನವೀಕೃತ ಕಟ್ಟಡದ ಕಾರ್ಯಚಟುವಟಿಕೆಗೆ ದಿನಾಂಕ 18.01.2015 ರವಿವಾರದಂದು ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖಾ ಸಚಿವರಾದ ಶ್ರೀ ಯು.ಟಿ. ಖಾದರ್‌ರವರಿಂದ ಚಾಲನೆ. ಕೋರ್ ಬ್ಯಾಂಕಿಂಗ್ ಸೇವೆಯನ್ನು ಗೌರವಾನ್ವಿತ ಅತಿಥಿಗಳಾದ ಫಾ। ರಿಚರ್ಡ್ ಕೊಯ್ಲೊ ಹಾಗೂ ಮಂಗಳೂರು ಶಾಖಾ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿಸೋಜಾರವರು ಉದ್ಘಾಟಿಸಿದರು.





ಶ್ರೀ ಕಾಮಾಕ್ಷಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ಪರಮ ಪೂಜ್ಯ ಡಾ॥ ಶ್ರೀ.ಮ.ನಿ.ಪ್ರ. ಕೊಟ್ಟುರೇಶ್ವರ ಮಹಾಸ್ವಾಮಿಗಳಿಂದ ಉದ್ಘಾಟನೆ.



ಶ್ರೀ ಸಿಂಚನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಮೂಡಬಿದಿರೆ ಸಹಕಾರಿಯ ಇ–ಸ್ಟ್ಯಾಂಪಿಂಗ್ ಕೇಂದ್ರವನ್ನು ವಕೀಲರು ಹಾಗೂ ನೋಟರಿ ಶ್ರೀ ಹರೀಶ್ ಪಿ. ಇವರಿಂದ ಉದ್ಘಾಟನೆ.

# ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಟ್ಟಡ ಉದ್ಘಾಟನೆ ಹಾಗೂ ವಾರ್ಷಿಕೋತ್ಸವ



ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ಕಟ್ಟಡ ಉದ್ಘಾಟನೆ ಹಾಗೂ ಹತ್ತನೇ ವಾರ್ಷಿಕೋತ್ಸವ ಸಮಾರಂಭ. ಇದೇ ಸಂದರ್ಭದಲ್ಲಿ ಶ್ರೀ ಶಿವಾಜಿ ಮಹಾರಾಜರ ಪ್ರತಿಮೆಯನ್ನು ತುಮಕೂರಿನ ಹಿರೇಮಠದ ಡಾ|| ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು, ಶ್ರೀ ಗೋಸಾಯಿಮಠದ ಶ್ರೀ ಭವಾನಿ ಪೀಠದ ಶ್ರೀ ಬುದ್ಧಿಯೋಗಾನಂದ ಸ್ವಾಮೀಜಿಯವರು ಅನಾವರಣಗೊಳಿಸಿದರು. ಮಾಜಿ ಗೃಹ ಸಚಿವರಾದ ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಸಹಕಾರಿಯ ಅಂತರ್ಜಾಲ ತಾಣವನ್ನು ಉದ್ಘಾಟಿಸಿದರು.

ಸಂಸದರಾದ ಶ್ರೀ ಎಸ್.ಪಿ.ಮುದ್ದ ಹನುಮೇಗೌಡರು ಸಹಕಾರಿಯ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಶ್ರೀ ಗಂಗಾಧರಯ್ಯ, ಸಂಯುಕ್ತ ಸಹಕಾರಿಯ ನಿರ್ದೇಶಕರು, ಶ್ರೀ ಪಿ.ಆರ್.ನಾರಾಯಣಗೌಡ, ನಿರ್ದೇಶಕರು, ತುಮಕೂರು ಜಿಲ್ಲಾ ಸಹಕಾರ ಕೇಂದ್ರ ನಿ., ಶ್ರೀ ರಾಜಸಾಬ್, ಉಪಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ಶ್ರೀ ಜಯಕುಮಾರ, ಅಧ್ಯಕ್ಷರು, ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ನಿ., ಶ್ರೀ ಕೆ ಸತ್ಯಮೂರ್ತಿ, ಜಿಲ್ಲಾಧಿಕಾರಿಗಳು, ಶ್ರೀ ಐ.ಪಿ.ಜಗನ್ನಾಥ ಠಾವರೆ, ಮರಾಠ ಪತ್ರಿಕೆ ವರದಿಗಾರರು, ಶ್ರೀ ಜಯರಾಮ, ವಿದ್ಯಾನಿಕೇತನ ಶಾಲೆಯ ಕಾರ್ಯದರ್ಶಿಗಳು, ಶ್ರೀ ಸುರೇಶ್‌ರಾವ್ ಟಿ.ಎಲ್, ಸಹಕಾರಿಯ ಅಧ್ಯಕ್ಷರು, ಶ್ರೀ ಟಿ.ಆರ್.ಮದನ ಮೋಹನರಾವ್, ಸಹಕಾರಿಯ ಉಪಾಧ್ಯಕ್ಷರು, ಶ್ರೀ ಜಿ.ಎನ್. ಶಂಕರ್‌ನಾರಾಯಣ, ಮುಖ್ಯಕಾರ್ಯನಿರ್ವಾಹಕರು ಇವರುಗಳು ಉಪಸ್ಥಿತರಿದ್ದರು.



ಶ್ರೀಮಾತಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹಿರೇಸರ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮ.



ಶ್ರೀ ಮಹಾಗಣಪತಿ-ಮಹಾಸತಿ (ಎಮ್.ಜಿ.ಎಮ್) ಸೌಹಾರ್ದ ಪತ್ತಿನ ಸಹಕಾರಿ ನಿ., ಸರ್ಪನಕಟ್ಟೆ ಸಹಕಾರಿಯ ಪ್ರಾರಂಭೋತ್ಸವ.



ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯ ಕ್ಯಾಲೆಂಡರ್‌ನ್ನು ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಆರ್.ಮೂರ್ತಿಯವರಿಂದ ಬಿಡುಗಡೆ.



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಿಟ್ಲ ಶಾಖೆಯ ಉದ್ಘಾಟನಾ ಸಮಾರಂಭ.

## ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಶಾಖೆಯ ಉದ್ಘಾಟನೆ



ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ., ಗಂಗೊಳ್ಳಿ ಸಹಕಾರಿಯ ಪ್ರಥಮ ಶಾಖೆಯು ಕುಂದಾಪುರ ತಾಲೂಕಿನಲ್ಲಿ ದಿನಾಂಕ 23.01.2015ರಂದು ಪ್ರಾರಂಭವಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಚ್. ಗಣೇಶ ಕಾಮತ್, ಉಪಾಧ್ಯಕ್ಷರಾದ ಶ್ರೀ ಜಿ.ವೇದವ್ಯಾಸ ಆಚಾರ್ಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್, ಲೆಕ್ಕ ಪರಿಶೋಧಕರಾದ ಶ್ರೀ ಎನ್. ಶಾಂತಾರಾಮ ನಾಯಕ್, ಶ್ರೀ ಎ. ಸುದರ್ಶನ ಪೈ ಸಹಕಾರಿಯ ಕಾನೂನು ಸಲಹೆಗಾರರಾಗಿರುವ ಶ್ರೀ ಕೆ.ಜಿ.ಶೆಣೈ, ಕಟ್ಟಡದ ಮಾಲೀಕರಾಗಿರುವ ಶ್ರೀ ರತ್ನಾಕರ ಕಾಮತ್ ಹಾಗೂ ಸಹಕಾರಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿಗಳು ಉಪಸ್ಥಿತರಿದ್ದರು. ■

### ಫೆಬ್ರವರಿ ಮಾಹೆಯ ತರಬೇತಿ ಕಾರ್ಯಕ್ರಮಗಳ ವಿವರಗಳು

- ದಿನಾಂಕ : 24 ಫೆಬ್ರವರಿ 2015 ರಂದು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿಯಲ್ಲಿ "ಯುವಕರು ಹಾಗೂ ಸಹಕಾರ ಕುರಿತು ಸಂವಾದ" ಕಾರ್ಯಕ್ರಮ.
- ದಿನಾಂಕ : 25 / 26 ಫೆಬ್ರವರಿ 2015 ರಂದು ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ ಇಲ್ಲಿ "ಯುವಕರು ಹಾಗೂ ಸಹಕಾರ ಕುರಿತು ಸಂವಾದ" ಕಾರ್ಯಕ್ರಮ.
- ದಿನಾಂಕ : 24 ಮತ್ತು 25 ಫೆಬ್ರವರಿ 2015 ರಂದು ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ ಎರಡು ದಿನಗಳ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮ.


### ಅಕೌಂಟೆಂಟ್/ಮ್ಯಾನೇಜರ್ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಜನಪ್ರಿಯ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ನಿ., ಶಿವಮೊಗ್ಗ.
ನಂ.59,100 ಅಡಿ ರಸ್ತೆ ಹುಡ್ಕೋ ಕಾಲೋನಿ ವಿನೋಬನಗರ, ಶಿವಮೊಗ್ಗ.
ದೂ : 08182-265455, Email.bankingdivision555@gmail.com

ಕನಿಷ್ಠ 10 ವರ್ಷ ಬ್ಯಾಂಕ್, ಸಹಕಾರಿ ಬ್ಯಾಂಕ್, ಸಹಕಾರ ಸಂಘ ಅಥವಾ ಸೌಹಾರ್ದ ಸಹಕಾರಿಯಲ್ಲಿ ಕೆಲಸ ಮಾಡಿ ಅನುಭವವಿರುವ ಪದವೀಧರರು (B.Sc, B.Com, B.B.M, M.Sc, M.Com, M.B.A) ಅಕೌಂಟೆಂಟ್ / ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ. ಪೂರ್ಣ ವಿವರಗಳೊಂದಿಗೆ ಸಂಪರ್ಕಿಸಿ.

**ಬಿ. ಶೇಖರಪ್ಪ,** ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
9448680979 / 9844229170

## ಹಿರಿಯ ಸಹಕಾರಿ ಮಾಜಿ ಶಾಸಕ ಶ್ರೀ ನಾರಾಯಣರಾವ ಮನ್ನಳ್ಳಿಯವರಿಗೆ ಶ್ರದ್ಧಾಂಜಲಿ



ಶ್ರೀ ನಾರಾಯಣರಾವ ಮನ್ನಳ್ಳಿ, ಮಾಜಿ ಶಾಸಕರು, ಬೀದರ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಹಾಲಿ ನಿರ್ದೇಶಕರಾಗಿದ್ದ ಜಿಲ್ಲೆಯ ಹಿರಿಯ ರಾಜಕಾರಣಿ ಸಾಮಾಜಿಕ ಅಭಿವೃದ್ಧಿಯ ಪ್ರತಿಪಾದಕ ಇವರು ದಿನಾಂಕ 28-1-2015 ರಂದು ನಿಧನರಾದ ವಾರ್ತೆ ತಿಳಿದ ನಂತರ ಸಂಯುಕ್ತ ಸಹಕಾರಿಯ ನಿರ್ದೇಶಕರ ತರಬೇತಿ ಕಾರ್ಯಕ್ರಮದಲ್ಲಿ ಶ್ರೀಯುತರ ಆತ್ಮಕ್ಕೆ ಶಾಂತಿಕೋರಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಶ್ರೀಯುತರು ನಡೆಸಿದ ಜೀವನದ ಬಗ್ಗೆ ವಿಷಯಗಳನ್ನು ತಿಳಿಸಿದರು.

# ಉಚಿತ ನೇತ್ರ ತಪಾಸಣಾ ಮತ್ತು ಉಚಿತ ಶಸ್ತ್ರ ಚಿಕಿತ್ಸೆ ಹಾಗೂ ನೇತ್ರದಾನ ಶಿಬಿರ



ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಲಿ., ಬೆಂಗಳೂರು ಸಹಕಾರಿಯಿಂದ ಡಿಸೆಂಬರ್ 25ರಂದು ಆನೇಕಲ್ ತಾಲೂಕಿನ ಹಾರಗದ್ದೆಯಲ್ಲಿ ಆನೇಕಲ್ ಮತ್ತು ಹಾರಗದ್ದೆ ಸುತ್ತಮುತ್ತ ವಾಸಿಸುತ್ತಿರುವ ಸಹಕಾರಿಯ ಸದಸ್ಯರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಲಯನ್ಸ್ ಕ್ಲಬ್ ಆಫ್ ಜಿಗಣಿ ಟೌನ್ ಹಾಗೂ ನಾರಾಯಣ ನೇತ್ರಾಲಯ ಸಂಸ್ಥೆಗಳ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣಾ ಮತ್ತು ಉಚಿತ ಶಸ್ತ್ರ ಚಿಕಿತ್ಸೆ ಹಾಗೂ ನೇತ್ರದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. 356 ಸದಸ್ಯರು ನೇತ್ರ ತಪಾಸಣೆಯನ್ನು ಮಾಡಿಸಿದರು, ಅದರಲ್ಲಿ 152 ಸದಸ್ಯರಿಗೆ ಕನ್ನಡಕದ ಅವಶ್ಯಕತೆ ಇದ್ದು, ಅವುಗಳನ್ನು ಲಯನ್ಸ್ ಕ್ಲಬ್ ಹಾಗೂ ಸಹಕಾರಿ ವತಿಯಿಂದ ವಿತರಿಸಲಾಯಿತು. 18 ಸದಸ್ಯರು ನೇತ್ರದಾನ ಮಾಡಲು ಸ್ವ-ಇಚ್ಛೆಯಿಂದ ಒಪ್ಪಿಕೊಂಡಿದ್ದಾರೆ.



ಶ್ರೀ ಶಿವಾಜಿ ಮಹಾರಾಜ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿ., ವಿಜಯಪುರ ಸೌಹಾರ್ದ ಸಹಕಾರಿಯಿಂದ ದಿನಾಂಕ 12.01.2015ರಂದು ರಾಷ್ಟ್ರಮಾತಾ ಜೀಜಾವು ಅವರ 417ನೇ ಜಯಂತಿಯ ಆಚರಣೆ.





ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಿಜಾಪುರ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಸನ್ಮಾನ.

# Guidelines for Licensing of Small Finance Banks in the Private Sector

**Compiled by : K.Vittal Shetty,** DJ&PR, CAIIB, DBM (IIB), MBM (Former Chief General Manager & CEO of SUCO BANK)

(ಹಿಂದಿನ ಸಂಚಿಕೆಯಿಂದ)

**14. Transition path :** The small finance bank may choose to continue as a differentiated bank. If it aspires to transit into a universal bank, such transition will not be automatic, but would be subject to it applying to RBI for such conversion and fulfilling minimum paid-up capital / net worth requirement as applicable to universal banks; its satisfactory track record of performance as a small finance bank for a minimum period of five years and the outcome of RBI's due diligence exercise. On transition into a universal bank, it will be subjected to all the norms including NOFHC structure as applicable to universal banks.

**15. Procedure for application :** In terms of Rule 11 of the Banking Regulation (Companies) Rules, 1949, applications shall be submitted in the prescribed form for setting up of small finance banks in the private sector, along with other details as mentioned above, contained in an envelope super scribed "Application for Small Finance Bank" to RBI till the close of business as on January 16, 2015.

**16. Procedure for RBI decisions**

i. The applications will be initially screened by RBI to ensure prima facie eligibility of the applicants. RBI may apply additional criteria to determine the suitability of applications, in addition to the prescribed 'fit and proper' criteria.

ii. Thereafter an External Advisory Committee (EAC) comprising eminent professionals like bankers, chartered accountants, finance professionals, etc. will evaluate the applications. The names of the professionals in EAC will be placed on RBI's website.

iii. The External Advisory Committee will reserve the right to call for more information as well as have discussions with any applicant/s and seek clarification on any issue as may be required by it. The EAC will submit its recommendations to RBI for consideration. The decision to issue an in-principle approval for setting up of a bank will be taken by RBI. RBI's decision in this regard will be final.

iv. The validity of the in-principle approval issued by RBI will be eighteen months from the date of granting such in-principle approval and would thereafter lapse automatically. Therefore, the bank will have to be set up within eighteen months of grant of in-principle approval.

v. After issue of the in-principle approval for setting up of a bank, if any adverse features are noticed subsequently regarding the promoters or the companies/entities with which the promoters are associated and the group in which they have interest, the RBI may impose additional conditions and if warranted, it may withdraw the in-principle approval.

vi. In order to ensure transparency, the names of applicants for bank licences will be placed on the RBI website on receipt of the applications. The names of successful applicants will also be placed on the RBI website.

vii. Banking being a highly leveraged business, licences shall be issued on a very selective basis to those who conform to the above requirements, who have an impeccable track record and who are likely to conform to the best standards of customer service and efficiency. Therefore, it may not be possible for RBI to issue licences to all the applicants meeting the eligibility criteria prescribed above.

RBI will adopt a cautious approach in licensing small finance banks in the initial years, and with experience gained, may suitably revise the approach.

P.S.:The Reserve Bank of India received requests seeking extension of time for submission of applications for Small Finance Banks and also for setting up Payments Banks, the last date for which was January 16, 2015.

Application receiving date is now stand extended and will now be accepted till the close of business as on February 2, 2015. ■

# ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಹಾಗೂ ಸಹಕಾರ



▶▶ ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ)

ನಾನು 10.08.2014ರ ವಿಜಯವಾಣಿ ಪತ್ರಿಕೆಯಲ್ಲಿ ಶ್ರೀ ಎಸ್. ರವಿಶಂಕರ್ ಇವರ "ಒಳನೋಟ" ಲೇಖನ ಓದುತ್ತಿರುವಾಗ ಈ ಕೆಳಕಂಡ ಉಲ್ಲೇಖ ನನ್ನ ಗಮನ ಸೆಳೆಯಿತು.

(1) "............... ನಾಗರೀಕ ಸ್ವಾತಂತ್ರ್ಯ ಹಾಗೂ ದೇಶದ ಸ್ವಯಂ ಆಡಳಿತ ಎಂಬರ್ಥದ ಸ್ವಾತಂತ್ರ್ಯ ಇಂದು ವೈಯಕ್ತಿಕ ಆಶಯಗಳ ಅಭಿವ್ಯಕ್ತಿಯಾಗಿ ರೂಪಾಂತರಗೊಂಡಿದೆ. ಇಲ್ಲಿ ಆಗಿರುವ ಬದಲಾವಣೆ ಎಂದರೆ ಸ್ವಾತಂತ್ರ್ಯದ ಅರ್ಥ ನಾವು ಪೌರಾಡಳಿತದಿಂದ ಮುಕ್ತಾಯವಾಗಿರುವುದು ಎನ್ನುವುದರಿಂದ ಆರಂಭಗೊಂಡು ವೈಯಕ್ತಿಕವಾಗಿ ನಾನು ಸಾಮಾಜಿಕ ಹಾಗೂ ಆರ್ಥಿಕ ಪಾಶಗಳಿಂದ ಮುಕ್ತನಾಗುವುದು ಎಂಬಲ್ಲಿಗೆ ಬಂದು ನಿಂತಿದೆ."



(2) "ಮಾನವ ಸ್ವಾತಂತ್ರ್ಯ ಜೀವಿ, ಕಟ್ಟುಪಾಡುಗಳನ್ನು ಸಹಜವಾಗಿಯೇ ತಿರಸ್ಕರಿಸುವ ಪ್ರವೃತ್ತಿಯುಳ್ಳವನು. ನಿಯಮ, ಕಾನೂನು, ಕಟ್ಟಳೆ, ಹೆದರಿಕೆ, ಬೆದರಿಕೆಗಳಿಂದ ಅವನನ್ನು ಸಾಮಾಜಿಕ ಬಂಧನಕ್ಕೊಳಪಡಿಸಬಹುದೇ ವಿನಃ, ತನ್ನಷ್ಟಕ್ಕೆ ತನ್ನನ್ನು ಬಿಟ್ಟುಕೊಟ್ಟ ಮನುಷ್ಯ ಸ್ವೇಚ್ಛಾಚಾರಿ. ಯಾರ ಅಪ್ಪಣೆಯೂ, ಯಾವುದರ ಹಂಗೂ ಇಲ್ಲದೇ ಬದುಕಲು ಇಚ್ಛಿಸುವವನು. ಹಾಗೆಯೇ ತನ್ನ ವೈಯಕ್ತಿಕ ಹಿತಾಸಕ್ತಿಯನ್ನು ಸಾಮಾಜಿಕ ಹಿತಾಸಕ್ತಿಗಿಂತ ಮುಂಚೆ ಇಡುವ ಸ್ವಾರ್ಥ ಜೀವಿ."

(3) "............... ತನ್ನ ಕಡೆಗೆ ಯಾರಾದರೂ ತುದಿಗಣ್ಣಿನಲ್ಲಿ ನೋಡಿದರೂ ಸಾಕು. ಸ್ವಾತಂತ್ರ್ಯ ಹರಣವಾಯಿತೆಂದು ರಂಪ ಮಾಡುವ ಮಟ್ಟಿಗೆ ತನ್ನ ಸ್ವಾತಂತ್ರ್ಯದ ಬಗ್ಗೆ ಅಸುರಕ್ಷಿತ ಭಾವನೆಯನ್ನು ಬೆಳೆಸಿಕೊಂಡಿದ್ದಾನೆ. ............... ನನಗೆ ಪ್ರಪಂಚ ತೆರೆದಿರಬೇಕು, ಆದರೆ, ನಾನು ಪ್ರಪಂಚಕ್ಕೆ ಏನನ್ನು ತೋರಗೊಡುವುದಿಲ್ಲ ಎನ್ನುವ ಮಾಹಿತಿ ಯುಗದ ಸ್ವಾತಂತ್ರ್ಯ ವ್ಯಕ್ತಿಗಳ ಆಷಾಡಭೂತಿ ನಡವಳಿಕೆ."

ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ, ಈ ಮೇಲ್ಕಂಡ ಉಲ್ಲೇಖದಡಿ ಗಮನಿಸಬಹುದಾದ ಅಂಶವೆಂದರೆ, ರಾಷ್ಟ್ರದ ಸಂವಿಧಾನಕ್ಕೆ ತಂದ 97ನೇ ತಿದ್ದುಪಡಿಯ 43 ಬಿ ಗೆ ತಂದ ಹೊಸ ಸೇರ್ಪಡೆ.

"ರಾಜ್ಯ ಸಹಕಾರ ಸಂಘಗಳ ಸ್ವ-ಇಚ್ಛೆಯ ಸಂಘಟನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆ/ ನಿರ್ವಹಣೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನಿಸಬೇಕು." ಹಾಗೂ ಅನುಚ್ಛೇದ 243 ಝಡ್ಐ ನಲ್ಲಿ "ರಾಜ್ಯ ವಿಧಾನ ಮಂಡಳಿಗಳು ಸ್ವ-ಇಚ್ಛಾ ರಚನೆ, ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಸ್ಥೆಗಳ ಸಂಘಟನೆ, ನಿಯಂತ್ರಣ ಮತ್ತು ಸಮಾಪನೆ ಸಂಬಂಧಪಟ್ಟಂತೆ ಕಾನೂನು ರಚಿಸುವುದು."

ಮೇಲ್ಕಂಡ ಸಂವಿಧಾನ ತಿದ್ದುಪಡಿಯಿಂದ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಅದರಂತೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸೌಹಾರ್ದ ಕಾಯಿದೆ 1997ಕ್ಕೆ ಪೂರಕ ತಿದ್ದುಪಡಿಗಳು ಮತ್ತು 27.07.2014ರಂದು ಕೆಲವು ನ್ಯೂನತೆಗಳನ್ನು ಸರಿಪಡಿಸಲು ತಂದ ಮತ್ತೊಂದು ತಿದ್ದುಪಡಿ ಕಾಯಿದೆಯಲ್ಲಿ ಸೇರಿಸಲಾಗಿದೆ.

ಈ ಸಂವಿಧಾನ ತಿದ್ದುಪಡಿಗೆ ಪೂರ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಕಾಯಿದೆ ರಚಿಸುವಾಗ ಪೀಠಿಕೆಯಲ್ಲಿ ಈ ಕೆಳಗಿನಂತೆ

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವ-ಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ."

ಈ ಧ್ಯೇಯೋದ್ದೇಶದಿಂದ ಸೌಹಾರ್ದ ಸಹಕಾರಿ ಕಾಯಿದೆ ರಚನೆಯಾಗಿದೆ. ಅಂದರೆ ಸರ್ಕಾರದ/ ನಿಬಂಧಕರು ಸಹಕಾರ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ, ದಿನನಿತ್ಯ ಅದರ ವ್ಯವಹಾರ

ನೀತಿಗಳಲ್ಲಿ ಮಧ್ಯಪ್ರವೇಶ ಮಾಡಬಾರದೆಂದು. ಅದಕ್ಕಾಗಿಯೇ ನಿಬಂಧಕರ ನಿಯಂತ್ರಣ ಕಡಿತಗೊಳಿಸಿ, ಅವರ ಕೆಲಸವನ್ನು (1) ಸಹಕಾರಿಯ ನೋಂದಣಿ (2) ವಿವಾದಗಳ ಇತ್ಯರ್ಥ (3) ಸಮಾಪನೆ ಜೊತೆಗೆ 2004 ರಲ್ಲಿ (4) ಸಹಕಾರಿ ವಿಚಾರಣೆ ಹಾಗೂ 2013ರಲ್ಲಿ ಆಡಳಿತ ಮಂಡಲಿ ಚುನಾವಣೆ ನಡೆಸಲು ಸಂವಿಧಾನದ ಮಾರ್ಗದರ್ಶನದಂತೆ ಪ್ರತ್ಯೇಕ ಚುನಾವಣಾ ಪ್ರಾಧಿಕಾರ ರಚಿಸಿದೆ. ಈ ಮೇಲ್ಕಂಡ ವಿಷಯಗಳನ್ನು ಹೊರತುಪಡಿಸಿ ಲೆಕ್ಕಪರಿಶೋಧಕರನ್ನು, ಆಡಿಟ್ ಇಲಾಖೆ ನಿರ್ದೇಶಕರು ತಯಾರಿಸಿದ ಪಟ್ಟಿಯಿಂದ ಒಬ್ಬ ಲೆಕ್ಕಾಧಿಕಾರಿಯನ್ನು ನೇಮಿಸಲು ಸಹಕಾರಿಯ ಮಹಾಸಭೆಗೆ ನೀಡಲಾಗಿದೆ. (ಇದಕ್ಕೆ ಪೂರ್ವದಲ್ಲಿ ಕಾಯಿದೆಯಲ್ಲಿಯೇ ಸೃಷ್ಟಿಯಾದ ಸಂಯುಕ್ತ ಸಹಕಾರಿ ತಯಾರಿಸಿದ ಪಟ್ಟಿಯಿಂದ ಆಯ್ಕೆ ಮಾಡಬೇಕಾಗಿತ್ತು)

ರಾಷ್ಟ್ರಮಟ್ಟದಲ್ಲಿ ಸಹಕಾರಿ ಕಾಯಿದೆಯಲ್ಲಿ ಒಂದು ಶಾಸನಾತ್ಮಕ ಪ್ರಾಧಿಕಾರವನ್ನು ಹುಟ್ಟು ಹಾಕಿ ಅದಕ್ಕೆ ನಿಬಂಧಕರು ನಿರ್ವಹಿಸಬೇಕಾದ ಕಾರ್ಯಗಳನ್ನು (ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ) ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ಸಂಯುಕ್ತ ಸಹಕಾರಿಯನ್ನು ಹುಟ್ಟು ಹಾಕಿದೆ. ಅದಕ್ಕೆ ಪ್ರಮುಖವಾಗಿ

(1) ಸಹಕಾರಿಗಳನ್ನು ಸಂಘಟಿಸುವುದು, ಪ್ರವರ್ತಿಸುವುದು

(2) ಮಾದರಿ ಉಪನಿಯಮಗಳನ್ನು ರಚಿಸುವುದು

(3) ಸಂಶೋಧನೆ ಮತ್ತು ಮೌಲ್ಯಮಾಪನ

(4) ಸಹಕಾರಿಗಳಿಗೆ ನೀತಿ ಸಂಹಿತೆ ರೂಪಿಸುವುದು

(5) ಆರ್ಥಿಕ ಸಬಲತೆಯ ಮಾನದಂಡಗಳನ್ನು ರಚಿಸುವುದು

(6) ಸಹಕಾರ ಶಿಕ್ಷಣ ನಿಧಿ ನಿರ್ವಹಿಸುವುದು

(7) ಸದಸ್ಯ ಸಹಕಾರಿ ಪರಿವೀಕ್ಷಣೆ

(8) ಸಹಕಾರಿ ಆಡಳಿತ ಮಂಡಲಿ ರದ್ದುಪಡಿಸುವುದು ಅಥವಾ ಅಮಾನತ್ತಿನಲ್ಲಿಡುವುದು

(9) ಸದಸ್ಯ ಸಹಕಾರಿಗಳು ಲೆಕ್ಕತಪಾಸಣೆ, ಮಹಾಸಭೆ, ಮಾಹಿತಿ ಸಲ್ಲಿಕೆ ಬಗ್ಗೆ ಸೂಕ್ತ ಕ್ರಮ, ಮತ್ತಿತರೆ ಪ್ರಕಾರ್ಯಗಳನ್ನು ಸಂಯುಕ್ತ ಸಹಕಾರಿಗೆ ವರ್ಗಾಯಿಸಿದೆ. ಅಂದರೆ ಸಂವಿಧಾನ ತಿದ್ದುಪಡಿಯ ಪೂರ್ವದಲ್ಲಿಯೇ ಕರ್ನಾಟಕ ಸರ್ಕಾರ ಸೌಹಾರ್ದ ಕಾಯಿದೆ ರಚಿಸಿ, ಸಂವಿಧಾನ ಆಶಯದಂತೆ 15 ವರ್ಷಗಳ ಹಿಂದೆಯೇ ಕಾರ್ಯ ನೀತಿ ರೂಪಿಸಿದೆ. ಸೌಹಾರ್ದ ಕಾಯಿದೆಯಲ್ಲಿನ ಸಂಯುಕ್ತ ಸಹಕಾರಿ ರಚನೆ ಮಾಡಿ ಅದಕ್ಕೆ ನಿಬಂಧಕರ ಪ್ರಕಾರ್ಯಗಳನ್ನು ವರ್ಗಾಯಿಸಿದೆ. ಅದರ ವಿಮರ್ಶೆ ಅವಶ್ಯಕ.

ಚುನಾಯಿತ ಪ್ರತಿನಿಧಿಗಳಿಗೆ ಶಾಸನಾತ್ಮಕ ಅಧಿಕಾರವನ್ನು ವರ್ಗಾಯಿಸಿದ ನಂತರ, ಅಂತಹ ನಿರ್ದೇಶಕರು, ಅಂತಹ ಅಧಿಕಾರ ಚಲಾಯಿಸಲು ಪ್ರಬುದ್ಧರಾಗಿದ್ದಾರೆಯೇ? ಅಂದರೆ ಅರೆನ್ಯಾಯಿಕ ಅಧಿಕಾರ ಚಲಾಯಿಸಲು, ಅಧಿಕಾರೇತರಿಗೆ (ಅವರು ಆಯ್ಕೆಯಾದ 5 ವರ್ಷದ ಅವಧಿಗೆ/ಅವಧಿಯಲ್ಲಿ) ತರಬೇತಿ ಅವಶ್ಯಕತೆ ಇದೆ/ಇರಬೇಕೇ? ಇರಬೇಕು ಸ್ವಾಭಾವಿಕ ನ್ಯಾಯ ನೀತಿಯನ್ನು ನ್ಯಾಯಾಲಯಗಳು ಸಂವಿಧಾನದ ಆಶಯದಂತೆ, ನ್ಯಾಯಾಧೀಶರು ಪೂರ್ಣ ಪ್ರಮಾಣದ ತರಬೇತಿ ನಂತರ ನೇಮಕವಾಗಿ ನ್ಯಾಯ ವಿತರಣೆ ಮಾಡುತ್ತಾರೆ, ಅಂತಹ ಅಧಿಕಾರವನ್ನು ಚುನಾಯಿತ ಪ್ರತಿನಿಧಿಗಳು ನಿರ್ವಹಿಸಲು (ಯಾವುದೇ ತರಬೇತಿ ಇಲ್ಲದೇ) ಕಷ್ಟ ಸಾಧ್ಯ. ಆದ್ದರಿಂದ ಸಂಯುಕ್ತ ಸಹಕಾರಿಯ ಆಯ್ಕೆಯಾದ ನಿರ್ದೇಶಕ ಮಂಡಲಿಗೆ, ಅರೆನ್ಯಾಯಿಕ ಅಧಿಕಾರ ಚಲಾಯಿಸಲು ಅವಶ್ಯಕ ಇದೆ/ಇರಬೇಕು. ವಿಧಾನ ಮಂಡಳ ದಿನಾಂಕ 27.07.2014 ರಂದು ಹೊಸದಾಗಿ ಕಲಂ 53 ಬಿ ಯನ್ನು ಕರ್ನಾಟಕ ಸೌಹಾರ್ದ ಕಾಯಿದೆಗೆ ಸೇರಿಸಿದೆ.

"ಸಂಯುಕ್ತ ಸಹಕಾರಿ ಅಧಿನಿಯಮ, ನಿಯಮಗಳಿಗನುಸಾರವಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ವಿಫಲವಾದಲ್ಲಿ ಸೂಕ್ತ ವಿಚಾರಣೆಯ ನಂತರ ಅಂತಹ ವಿಫಲತೆಗೆ ಕಾರಣವಾದವರಿಗೆ ಅಹವಾಲು ಸಲ್ಲಿಸಲು ಅವಕಾಶ ನೀಡಿದ ತರುವಾಯ ನಿಬಂಧಕರು ಅಂತಹವನ್ನು ಅನರ್ಹತೆಗೊಳಿಸತಕ್ಕದ್ದು."

ಈ ಮೇಲ್ಕಂಡ ಅಂಶದ ಸೇರ್ಪಡೆಯಲ್ಲಿ ಗಮನಿಸಬೇಕಾದ ವಿಷಯವೆಂದರೆ, ಈ ಕಾಯಿದೆ ರಚನೆಯಾಗಿ ಸುಮಾರು 15 ವರ್ಷಗಳಾಗಿದೆ ಮತ್ತು ಜಾರಿಗೆ ಬಂದು ಸುಮಾರು 13 ವರ್ಷಗಳು ಸಂದಿದೆ. ಈ ಅವಧಿಯಲ್ಲಿ ನಿಬಂಧಕರು ನಿರ್ವಹಸಬೇಕಾದ ಬಹಳಷ್ಟು ಕಾರ್ಯಗಳನ್ನು ಸಂಯುಕ್ತ ಸಹಕಾರಿ ನಿರ್ವಹಿಸುತ್ತಿದ್ದರೂ ಮೇಲ್ನೋಟಕ್ಕೆ ಸಹಕಾರಿಗಳ ಮೇಲೆ ಪ್ರಭಾವ ಬೀರಿಲ್ಲ ಮತ್ತು ನಿಯಂತ್ರಿಸುತ್ತಿರುವ ಪ್ರಯತ್ನ ಸಫಲವಾಗಿಲ್ಲ ಅಥವಾ ಸಂಯುಕ್ತ ಸಹಕಾರಿ ನಿರ್ದೇಶಕರು, ಅವರ ಕರ್ತವ್ಯ ನಿರ್ವಹಿಸಲು ಪ್ರಯತ್ನಿಸಿಲ್ಲ ಅಥವಾ ಪ್ರಭಾವಕ್ಕೆ ಒಳಗಾಗಿ ಕ್ರಮ ಜರುಗಿಸದೇ ಇರಬಹುದು ಎಂಬ ಅನುಮಾನದ ದೃಷ್ಟಿಯಿಂದ ಈ ಮೇಲ್ಕಂಡ ಕಲಂ 53 ಬಿ ಸೇರ್ಪಡೆ ಮಾಡಲಾಗಿದೆ. ನಾನು ಪ್ರಾರಂಭದಲ್ಲಿ ಅರೆನ್ಯಾಯಿಕ ವ್ಯವಹಾರದಲ್ಲಿ ಅನುಭವದ ಕೊರತೆ/ಅಥವಾ ಪ್ರಭಾವಕ್ಕೊಳಗಾಗಿ ಕ್ರಮ ಜರುಗಿಸದೇ ಇರುವುದು ಮುಕ್ತ ನಿಯಂತ್ರಿಸುವ ಮನಸ್ಥಿತಿ ಇಲ್ಲದೇ ಇರುವುದು ಮತ್ತಿತರ ಕಾರಣಗಳಿಂದ ಸಂಯುಕ್ತ ಸಹಕಾರಿ ವಿಫಲವಾಗಿದೆ ಎಂದು ಸರ್ಕಾರ ಭಾವಿಸಿರಬಹುದು.

ಇದರ ಜೊತೆಗೆ ಸಹಕಾರ ಇಲಾಖಾಧಿಕಾರಿಗಳಿಗೆ ಸೌಹಾರ್ದ ಸಹಕಾರಿಗಳ ಬಗ್ಗೆ ಇರುವ ತಪ್ಪು ತಿಳುವಳಿಕೆ. ನನ್ನ ಸಂಪರ್ಕಕ್ಕೆ ಬಂದ ಎಲ್ಲಾ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಬಗ್ಗೆ ನಕಾರಾತ್ಮಕ ನಿಲುವು ಪಡೆದಿರುವುದನ್ನು ಗಮನಿಸಿದ್ದೇನೆ. ಈ ಬಗ್ಗೆ ಸಂಯುಕ್ತ ಸಹಕಾರಿ ಮತ್ತು ನಿಬಂಧಕರು ಸಹಕಾರ ಇಲಾಖಾಧಿಕಾರಿಗಳಿಗೆ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1 /44/2014-16.
RNI No. KARBIL - 2004/18001. Pages 24



ಒಂದು ವಿಮರ್ಶಾತ್ಮಕ ಕಾರ್ಯಾಗಾರ ನಡೆಸಲು ಪ್ರಯತ್ನ ಪಡಬೇಕು. ಇದಕ್ಕೆ ಇಲಾಖೆ ಸಹಕರಿಸಬೇಕು. ಕಲಂ 53 ಬಿ ಸೇರ್ಪಡೆಯಿಂದ ನಿಬಂಧಕರು/ ಸರ್ಕಾರ ಸಂಯುಕ್ತ ಸಹಕಾರಿ ಕಾರ್ಯನಿರ್ವಹಣೆ ಬಗ್ಗೆ ಮಧ್ಯಪ್ರವೇಶ ಮಾಡುವ ಅವಕಾಶ ಕಲ್ಪಿಸಿದಂತಾಗಿದೆ.

ಕಲಂ 53ರಲ್ಲಿ ಸಂಯುಕ್ತ ಸಹಕಾರಿಗೆ ನೀಡಿರುವ ಅಧಿಕಾರ/ ಪ್ರಕಾರ್ಯಗಳನ್ನು ನಿರ್ವಹಿಸಲು ಕ್ಷೇತ್ರ ಸಿಬ್ಬಂದಿ ಕೊರತೆ ಇದೆ. ಬೆಂಗಳೂರಿನಲ್ಲಿ ಕುಳಿತು ನಿಯಂತ್ರಿಸಲು ಸಾಧ್ಯವಿಲ್ಲ. ಬೆಳಗಾವಿ ಮತ್ತು ಕಲಬುರಗಿ ವಿಭಾಗ ಮಟ್ಟದ ಕಾರ್ಯಾಲಯ ಪ್ರಾರಂಭವಾಗಿದ್ದರೂ, ಅಲ್ಲಿನ ಸಿಬ್ಬಂದಿ ಸಂಖ್ಯೆ, ಸಹಕಾರಿಗಳಿಗನುಗುಣವಾಗಿಲ್ಲ. ಗುಣಾತ್ಮಕ ನಿಯಂತ್ರಣಕ್ಕೆ ಸಿಬ್ಬಂದಿ ಅವಶ್ಯಕ. (ಮೈಸೂರು ಪ್ರಾಂತ್ಯ ಕಛೇರಿ ಸ್ಥಾಪಿಸಲು ಇತ್ತೀಚೆಗೆ ತೀರ್ಮಾನಿಸಲಾಗಿದೆ ಎಂದು ತಿಳಿದಿದ್ದೇನೆ)

ಈ ಲೇಖನದ ಉದ್ದೇಶ, ಸಂಯುಕ್ತ ಸಹಕಾರಿ ತನ್ನ ಆಡಳಿತ ಮಂಡಲಿ ಮುಖಾಂತರ ಕಲಂ 53ರಲ್ಲಿ ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಮಾಡದಿದ್ದರೆ, ನಿಬಂಧಕರು/ ಸರ್ಕಾರ ಮಧ್ಯಪ್ರವೇಶ ಮಾಡಲು ಅವಕಾಶ ಕಲ್ಪಿಸಿದೆ (53 ಬಿ).

ಈ ಅವಕಾಶಕ್ಕೆ ಸಂಯುಕ್ತ ಸಹಕಾರಿ ತುರ್ತಾಗಿ ನಿರ್ವಹಿಸಬೇಕಾದ ಕೆಲಸವೆಂದರೆ, ಸೌಹಾರ್ದ ಸಹಕಾರಿ ಕಾಯಿದೆಯ ಮೂಲ ಉದ್ದೇಶಕ್ಕೆ ಪೂರಕವಾಗಿ, ಸಂಯುಕ್ತ ಸಹಕಾರಿಯ ಸ್ವಾಯತ್ತತೆ ಬಗ್ಗೆ ಮತ್ತು ಕಲಂ 53ರಲ್ಲಿ ನೀಡಿರುವ ಪ್ರಕಾರ್ಯಗಳನ್ನು ನಿರ್ವಹಿಸಲು ತರಬೇತಿ ಅವಶ್ಯಕ. ಆದ್ದರಿಂದ ನ್ಯಾಯಿಕ, ಅರೆನ್ಯಾಯಿಕ, ಸಾಕ್ಷಿಗಳ/ ದಾಖಲೆಗಳ ಪರಿಶೀಲನೆ, ಪ್ರಕರಣಗಳನ್ನು ಇತ್ಯರ್ಥಪಡಿಸುವಾಗ ಅನುಸರಿಸುವ ನೀತಿ ನಿಯಮಗಳ ಬಗ್ಗೆ ಕಾರ್ಯಾಗಾರವನ್ನು ನಡೆಸಬೇಕು. ನಿರ್ದೇಶಕರೆಲ್ಲರೂ ಸಹಕಾರಿಗಳಿಗೆ ಮಾದರಿಯಾಗಿರಬೇಕೆಂದರೆ, ಅವರು ಮಾರ್ಗದರ್ಶಕ ಸ್ಥಾನ ತುಂಬಬೇಕು. ಸ್ವಾಭಿಮಾನ ಮತ್ತು ಸ್ವಯಂ ನಿಯಂತ್ರಿಸುವ ಬಗ್ಗೆ ತಿಳುವಳಿಕೆ ಇರುವಂತೆ ಮತ್ತು ಮಾದರಿಯಾಗಿರುವಂತೆ ನೋಡಿಕೊಳ್ಳಬೇಕು. ಹಾಗಾದಾಗ ಮಾತ್ರ ಸಂಯುಕ್ತ ಸಹಕಾರಿಯು ಉಳಿವಿಗೆ ಯಾವುದೇ ತೊಡಕು ಬಾರದಂತೆ ನೋಡಿಕೊಳ್ಳಬಹುದು.

ನಾನು ಶ್ರೀ ರವಿಶಂಕರ್ ಅವರ "ಒಳನೋಟ" ಉಲ್ಲೇಖಿಸಿದ ಉದ್ದೇಶ ಸ್ವಾಯತ್ತತೆ, ಸ್ವಯಂ ನಿಯಂತ್ರಣ, ಸ್ವಾತಂತ್ರ್ಯವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಬಾರದು ಮತ್ತು ಸಮಾಜದ ಬೆಳವಣಿಗೆಗೆ ಉಪಯೋಸಬೇಕೆಂಬ ಆಶಯದಿಂದ. ■

## ಯಾರು ಮಂಗಳಕರನೋ ಅವನೇ ಶಿವ

ಹಿಂದೂ ಧರ್ಮದಲ್ಲಿ ಯಾವ ಯಾವಾಗ ನಿರಾಕಾರ ಉಪಾಸನೆ ಬರುತ್ತದೋ ಆಗ ಆ ಪರಬ್ರಹ್ಮವನ್ನು ಶಿವ ಎಂದೇ ಸಂಬೋಧಿಸುತ್ತಾರೆ. ಶಿವನಿಗೆ ಲಯಕಾರಕ ಎಂದೂ ಸಹ ಕರೆಯುತ್ತಾರೆ. ಅಂದರೆ ಸೃಷ್ಟಿ ಮಾಡುವುದು ಬ್ರಹ್ಮನ ಕೆಲಸವಾದರೆ, ಆ ಸೃಷ್ಟಿಯಾದ ಆಕರಗಳಿಗೆ ಸ್ಥಿತಿ ಕೊಡುವುದು ವಿಷ್ಣುವಿನ ಕೆಲಸ. ಈ ರೀತಿ ಸೃಷ್ಟಿ, ಸ್ಥಿತಿ ಪಡೆದ ಆಕರಗಳಿಗೆ ಲಯ ಕಾಣಿಸುವವನು ಶಿವ. ಆದ್ದರಿಂದ ಶಿವನಿಗೆ ಲಯಕಾರ ಎಂದೂ ಸಹ ಕರೆಯುತ್ತಾರೆ. ಸಂಹಾರಕ ಅಥವ ಲಯಕಾರಕ ದೇವತೆ: ಶಿವ ಅಥವ ರುದ್ರ. ಋಗ್ವೇದದಲ್ಲಿ ಶಿವ ಎನ್ನುವ ದೇವತೆ ಇಲ್ಲ. ರುದ್ರ ಎನ್ನುವ ಹೆಸರಿನ ದೇವತೆ ಇದ್ದಾನೆ. ಈ ರುದ್ರನಿಗೆ ಶಿವ, ಈಶ್ವರ, ಶಂಭು, ಶಂಕರ, ಪಶುಪತಿ, ಮುಕ್ಕಣ್ಣ, ಶಶಿಧರ, ಚಂದ್ರಶೇಖರ, ನೀಲಕಂಠ, ನಂಜುಂಡ, ಮಹದೇಶ್ವರ, ಮಹೇಶ್ವರ, ನಾಗರಾಜ, ನಾಗೇಶ, ಕೈಲಾಸಪತಿ ಇತ್ಯಾದಿ ಹೆಸರುಗಳಿಂದ ಕರೆಯುವ ಶಿವನ ಧ್ಯಾನಿಸುವ ರಾತ್ರಿಯೇ ಶಿವರಾತ್ರಿ.



**ಮುಖಪುಟ ಚಿತ್ರ : ಬೇಲೂರಿನ ಲಯಕರ್ತ ಶಿವ**

ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ.
ದೂರವಾಣಿ : 0831–2401551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010